## ಅಧ್ಯಾಯ : 1 ಭಾರತೀಯ ಸಮಾಜದ ನಿರ್ಮಾಣ.

### ಒಂದು ಅಂಕದ ಪ್ರಶ್ನೆಗಳು

1. "ಡೆಮೊಗ್ರಫಿ" ಎಂಬ ಪದವನ್ನು ಪರಿಚಯಿಸಿದವರು ಯಾರು?
**ಆಶಿಯಾಲ್ ಗಿಲಿಯಾರ್ಡ್.**
2. ಭಾರತೀಯ ಸಂವಿಧಾನವು ಎಷ್ಟು ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಘೋಷಿಸಿದೆ?
**18 ಭಾಷೆಗಳು**
3. ಭಾರತಕ್ಕೆ ಕ್ರೈಸ್ತ ಧರ್ಮವನ್ನು ಪರಿಚಯಿಸಿದವರು ಯಾರು?
**ಸಂಥ ಭಾರ್ಥ್ಯಲೋಮ್**
4. ಭಾರತದ ಯಾವುದಾದರೊಂದು ಧಾರ್ಮಿಕ ಸಮುದಾಯವನ್ನು ಹೆಸರಿಸಿ.
**ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಸಿಖ್ ಹಾಗೂ ಜೈನ ಧರ್ಮ ಇವುಗಳಲ್ಲಿ ಒಂದು.**
5. ಜನಸಂಖ್ಯಾಶಾಸ್ತ್ರದ ಯಾವುದಾದರೊಂದು ಪ್ರಕಾರವನ್ನು ತಿಳಿಸಿ.
**ಔಪಚಾರಿಕ ಜನಸಂಖ್ಯಾಶಾಸ್ತ್ರ ಹಾಗೂ ಸಾಮಾಜಿಕ ಜನಸಂಖ್ಯಾಶಾಸ್ತ್ರ.**
6. ಭಾರತದ 2011 ರ ಜನಗಣತಿಯಲ್ಲಿ ದಾಖಲಾದ ಲಿಂಗಾನುಪಾತ ಪ್ರಮಾಣವನ್ನು ತಿಳಿಸಿ.
**940**
7. ಭಾರತದ ವೈವಿಧ್ಯತೆಯ ಯಾವುದಾದರೊಂದು ಆಧಾರವನ್ನು ಹೆಸರಿಸಿ.
**ಭೌಗೋಳಿಕ, ಜನಾಂಗೀಯ ಹಾಗೂ ಧಾರ್ಮಿಕ ವೈವಿಧ್ಯತೆ**
8. ಭಾರತದ ಜನಾಂಗೀಯ ಸಮೂಹಗಳಲ್ಲಿ ಒಂದನ್ನು ಹೆಸರಿಸಿ.
**ನಿಗ್ರಿಟೋ, ಪ್ರೊಟೊ ಅಸ್ಟ್ರಲಾಯ್ಡರ್ ಹಾಗೂ ನಾರ್ಡಿಕ್**
9. ಭಾರತದ ಅತ್ಯಂತ ಪ್ರಾಚೀನ ನಾಗರೀಕತೆ ಯಾವುದು?
**ಸಿಂಧೂ ಬಯಲಿನ ನಾಗರೀಕತೆ.**
10. ಡೆಮೊಗ್ರಫಿ ಎಂಬ ಪದವು ಹೇಗೆ ಉತ್ಪತ್ತಿಯಾಗಿದೆ.
**'ಡೆಮೊಸ್' ಮತ್ತು 'ಗ್ರಾಫೆನ್' ಗ್ರೀಕ್ ಭಾಷೆಯ ಅವಳಿ ಪದಗಳಿಂದ ಉತ್ಪತ್ತಿಯಾಗಿದೆ.**
11. ಏಕತೆ ಎಂದರೇನು?
**ನಾವೆಲ್ಲ ಒಂದು ಅಥವಾ ನಾವು ಎಂಬ ಭಾವನೆ ಸೂಚಿಸುವುದಕ್ಕೆ ಏಕತೆ ಎನ್ನುವರು**
12. ಪ್ರಾಂತಿಯವಾದ ಎಂದರೇನು?
**ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೇರಿದ ಜನರು ತಾವೆಲ್ಲ ಒಂದು ಎನ್ನುವ ಮನೋಭಾವಕ್ಕೆ ಪ್ರಾದೇಶಿಕವಾದವೆನ್ನುತ್ತೇವೆ.**
13. 2011 ರ ಜನಗಣತಿಯ ಪ್ರಕಾರ ಕರ್ನಾಟಕದ ಯಾವ ಜಿಲ್ಲೆಯು ಹೆಚ್ಚು ಜನಭರಿತವಾಗಿದೆ?
**ಬೆಂಗಳೂರು. (ಶೇ 15.75%)**
14. ಭಾಷಾವಾದ ಎಂದರೇನು?
**ಒಂದು ಭಾಷೆಯ ಜನರು ಹೊಂದಿರಬಹುದಾದ ತಮ್ಮ ಭಾಷೆಯ ಮೇಲಿನ ಪ್ರೀತಿಗೆ ಭಾಷವಾದವೆನ್ನುವರು**
15. ಲಿಂಗಾನುಪಾತದಲ್ಲಿ ವಿಪರೀತ ಅಸಮತೋಲನ ಹೊಂದಿರುವ ಕರ್ನಾಟಕದ ಯಾವುದಾದರೊಂದು ಜಿಲ್ಲೆಯನ್ನು ಹೆಸರಿಸಿ.
**ಬೆಂಗಳೂರು (916)**
16. ಭಾರತದ ಪ್ರಾಚೀನ ಹೆಸರುಗಳಲ್ಲಿ ಒಂದನ್ನು ಹೆಸರಿಸಿ.
**ಭರತಖಂಡ, ಭರತವರ್ಷ, ಜಂಬೂದ್ವೀಪ ಹಾಗೂ ಹಿಂದೂಸ್ಥಾನ.**
17. ಹಿಂದೂ ಧರ್ಮದ ಯಾವುದಾದರೂ ಇತರೆ ಹೆಸರುಗಳಲ್ಲಿ ಒಂದನ್ನು ತಿಳಿಸಿ.
**ಸನಾತನ ಧರ್ಮ, ವೈಧಿಕ ಧರ್ಮ, ಆರ್ಯಧರ್ಮ ಹಾಗೂ ವೇದಾಂತ ಧರ್ಮ.**

### ಎರಡು ಅಂಕದ ಪ್ರಶ್ನೆಗಳು

1. ಮಕ್ಕಳ ಲಿಂಗಾನುಪಾತ ಕುಸಿಯಲು ಕಾರಣವಾದ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.
**ಹೆಣ್ಣು ಮಕ್ಕಳು ಹುಟ್ಟುವುದನ್ನೇ ತಡೆಗಟ್ಟುವ ಗರ್ಭಪಾತಗಳು ಮತ್ತು ಹೆಣ್ಣು ಶಿಶು ಹತ್ಯೆಗಳು.**
**ಪ್ರಸವಪೂರ್ವ ಲಿಂಗಪತ್ತೆಯ ತಂತ್ರಜ್ಞಾನದ ದುರ್ಬಳಕೆ**
2. ಭಾರತೀಯ ಜನಸಂಖ್ಯಾಶಾಸ್ತ್ರದ ಎರಡು ಲಕ್ಷಣಗಳನ್ನು ಬರೆಯಿರಿ.
**ಭಾರತೀಯ ಜನಸಂಖ್ಯೆಯ ಗಾತ್ರ ಮತ್ತು ಬೆಳವಣಿಗೆ, ಭಾರತೀಯ ಜನಸಂಖ್ಯೆಯ ವಯೋರಚನೆ.**
3. "ಡಿಮಾರು" ಎಂಬುದು ಏನನ್ನು ಸೂಚಿಸುತ್ತದೆ.
**ಡಿ ಅಂದರೆ ಮಗಳು, ಮಾರು ಅಂದರೆ ಕೊಲ್ಲು ಅಥವಾ ಹೊಸಕಿ ಹಾಕು ಹೆಣ್ಣು ಶಿಶು ಹತ್ಯೆಯನ್ನು ಸೂಚಿಸುತ್ತದೆ.**
4. ಆರ್ಯನೀಕರಣದ ಪ್ರಕ್ರಿಯೆಗೆ ಅಡ್ಡಿಯಾಗಿರುವ ಎರಡು ಅಂಶಗಳನ್ನು ತಿಳಿಸಿ.
**1. ಬುಡಕಟ್ಟು ಸಮೂಹಗಳು ವಿಲೀನಗೊಳ್ಳಲು ನಿರಾಕರಿಸಿದವು. 2) ಪ್ರಬಲ ಜನಾಂಗೀಯ ಸಮೂಹಗಳಿಂದ ವಿಶೇಷ ಸಮಸಮ್ಯೆಗಳುಂಟಾದವು.**
5. 'ಬಿಮಾರು'ಎಂಬುದು ಏನನ್ನು ಸೂಚಿಸುತ್ತದೆ?
**ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಉತ್ತರ ಪ್ರದೇಶ ಈ ರಾಜ್ಯಗಳಲ್ಲಿರುವ ಜನಸಂಖ್ಯಾ ಸಮಸ್ಯೆಗಳನ್ನು ಕುರಿತು ಸೂಚಿಸುತ್ತದೆ.**
6. ಕೋಮುವಾದ ಎಂದರೇನು?
**ಒಂದು ಧರ್ಮಕ್ಕೆ ಸೇರಿದ ಜನರು ಬೇರೊಂದು ಧರ್ಮದ ವಿರುದ್ಧ ದ್ವೇಷ ಸಾರುವುದನ್ನು ಕೋಮುವಾದ ಎಂದು ಕರೆಯುತ್ತೇವೆ.**
7. ಭಾಷಾವಾದ ಎಂದರೇನು?
**ಒಂದು ಭಾಷೆಯ ಜನರು ಹೊಂದಿರಬಹುದಾದ ತಮ್ಮ ಭಾಷೆಯ ಮೇಲಿನ ಪ್ರೀತಿಗೆ ಭಾಷವಾದವೆನ್ನುವರು**
8. ಜನಸಂಖ್ಯಾಶಾಸ್ತ್ರದ ವಿಧಗಳನ್ನು ತಿಳಿಸಿರಿ.
**ಸಾಮಾಜಿಕ ಜನಂಖ್ಯಾಶಾಸ್ತ್ರ ಹಾಗೂ ಔಪಚಾರಿಕ ಜನಸಂಖ್ಯಾಶಾಸ್ತ್ರ.**
9. ಪ್ರಾಂತೀಯವಾದ ಎಂದರೇನು?
**ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೇರಿದ ಜನರು ತಾವೆಲ್ಲ ಒಂದು ಎನ್ನುವ ಮನೋಭಾವಕ್ಕೆ ಪ್ರಾದೇಶಿಕವಾದವೆನ್ನುತ್ತೇವೆ.**
10. ರಾಷ್ಟ್ರೀಯ ಭಾವೈಕ್ಯತೆಗೆ ಅಡ್ಡಿಪಡಿಸಿರುವ ಎರಡು ಸವಾಲುಗಳನ್ನು ತಿಳಿಸಿ.
**ಪ್ರಾದೇಶಿಕಾದ, ಕೋಮುವಾದ, ಭಾಷಾವಾದ, ಜಾತಿಯತೆ ಹಾಗೂ ಭಯೋತ್ಪಾದನೆ.**
11. ಭಾರತವನ್ನು ಏಕೆ ಭಾಷಾ ಸಂಗ್ರಹಾಲಯ ಎಂದು ಕರೆಯುತ್ತಾರೆ?

Sreenivasa U K

**ಹಲವಾರು ಭಾಷೆಗಳ ಆಗರವಾಗಿರುವದರಿಂದ ಭಾರತವನ್ನು ಭಾಷಾ ಸಂಗ್ರಹಾಲಯ ಎಂದು ಕರೆಯಲಾಗಿದೆ.**

12. ಭಾರತೀಯ ಜನಾಂಗೀಯ ಸಮೂಹಗಳಲ್ಲಿ ಯಾವುದಾದರೂ ಎರಡನ್ನು ತಿಳಿಸಿ.
**ನೀಗ್ರಿಟೊಗಳು, ಪ್ರೋಟೊ ಆಸ್ಟ್ರೊಲಾಯ್ಡ್, ಮಂಗೋಲಾಯ್ಡರು ಹಾಗೂ ಮೆಡಿಟೇರಿನಿಯನ್ನರು**

## ಐದು ಅಂಕದ ಪ್ರಶ್ನೆಗಳು:

1. ಭಾರತದ ಜನಸಂಖ್ಯಾಶಾಸ್ತ್ರೀಯ ಚಿತ್ರಣದ ಐದು ಯಾವುದಾದರೂ ಐದು ಲಕ್ಷಣಗಳನ್ನು ವಿವರಿಸಿರಿ.

**ಭಾರತದ ಜನಸಂಖ್ಯಾಶಾಸ್ತ್ರದ ಪ್ರಮುಖ ಲಕ್ಷಣಗಳು ಅಥವಾ ಸ್ವರೂಪ**

1. ಭಾರತೀಯ ಜನಸಮೂಹದ ಗಾತ್ರ ಮತ್ತು ಬೆಳವಣಿಗೆ. 2. ಭಾರತೀಯ ಜನಸಮೂಹದ ವಯೋರಚನೆ. 3. ಭಾರತದಲ್ಲಿ ಕುಸಿಯುತ್ತಿರುವ ಲಿಂಗಾನುಪಾತ. 4. ಭಾರತೀಯ ಜನಸಮೂಹದಲ್ಲಿ ಹೆಚ್ಚುತ್ತಿರುವ ಸಾಕ್ಷರತಾ ಪ್ರಮಾಣ. 5. ಹೆಚ್ಚುತ್ತಿರುವ ಗ್ರಾಮೀಣ ನಗರ ವ್ಯತ್ಯಾಸಗಳು

**ಭಾರತೀಯ ಜನಸಮೂಹದ ಗಾತ್ರ ಮತ್ತು ಬೆಳವಣಿಗೆ:–**1901ರಲ್ಲಿ 238 ಮಿಲಿಯನ್ ಇದ್ದ ಜನಸಂಖ್ಯೆ 2011ರಲ್ಲಿ 1210 ಮಿಲಿಯನ್‌ಗೆ ಏರಿದೆ. 1921ನ್ನು ಜನಸಂಖ್ಯಾ ಶಾಸ್ತ್ರೀಯ ವಿಭಜಕ ಎನ್ನಲಾಗಿದೆ. 1921ಕಿಂತ ಮುಂಚೆ ಜನಸಂಖ್ಯಾ ಬೆಳವಣಿಗೆ ಪ್ರಮಾಣ ಸ್ಥಿರವಾಗಿರಲಿಲ್ಲ. ನಂತರ ಏರಿಕೆ ಕಂಡುಬಂದಿದೆ. 2011ರ ಭಾರತದ ಜನಸಂಖ್ಯೆ 121 ಕೋಟಿ ಇರುವುದು.

**ಭಾರತೀಯ ಜನಸಮೂಹದ ವಯೋರಚನೆ:–** ಭಾರತೀಯ ಜನಸಮೂಹದ ವಯೋರಚನೆ ಗಮನಿಸಿದಾಗ ಭಾರತ ಕಿರಿಯರ ಜನಸಂಖ್ಯೆಯನ್ನು ಹೆಚ್ಚಾಗಿ ಹೊಂದಿದೆ. ಇತರ ದೇಶಗಳಿಗೆ ಹೋಲಿಸಿದಲ್ಲಿ ನಮ್ಮಲ್ಲಿ ಕಿರಿಯರ ಜನಸಂಖ್ಯೆ ಹೆಚ್ಚಾಗಿದೆ. 1971ರಲ್ಲಿ 15 ವರ್ಷಕಿಂತ ಕಡಿಮೆ ವಯೋಮಾನದವರು 42% ಇದ್ದು 2001ರಲ್ಲಿ 29%ಕ್ಕೆ ಇಳಿದಿದೆ. ವಯೋರಚನೆಯನ್ನಾಧರಿಸಿ ಭಾರತಕ್ಕೆ ಪ್ರಾಪ್ತವಾಗುವ ಜನಸಂಖ್ಯಾ ಲಾಭ ಲೆಕ್ಕ ಹಾಕಬಹುದು.

**ಭಾರತದಲ್ಲಿ ಕುಸಿಯುತ್ತಿರುವ ಲಿಂಗಾನುಪಾತ:–** ಭಾರತದಲ್ಲಿ ಲಿಂಗಾನುಪಾತದ ಪ್ರಮಾಣ ದಶಕದಿಂದ ದಶಕಕ್ಕೆ ಇಳಿಮುಖವಾಗುತ್ತಿದೆ. 1961ರಲ್ಲಿ 941 ರಷ್ಟಿದ್ದ ಲಿಂಗಾನುಪಾತ 1991ಕ್ಕೆ 927ಕ್ಕೆ ಇಳಿದಿದೆ. 2011ರಲ್ಲಿ 1000 ಪುರುಷರಿಗೆ 940ಕ್ಕೆ ಇಳಿದಿದೆ. ಕರ್ನಾಟಕದಲ್ಲಿ ಬೆಳಗಾವಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 924 ಮತ್ತು 934 ರಷ್ಟು ಲಿಂಗಾನುಪಾತವಿದೆ. ಹುಣಸೂರ ತಾಲೂಕಿನಲ್ಲಿ 1009/1000 ದಷ್ಟಿದ್ದು ಆಶಾದಾಯಕವಾಗಿದೆ. ಪಂಜಾಬ ಕಡಿಮೆ ಲಿಂಗಾನುಪಾತ ಹೊಂದಿದೆ. ಸಿಕ್ಕಿಂ ಅತಿ ಹೆಚ್ಚು ಲಿಂಗಾನುಪಾತ ಹೊಂದಿದ ರಾಜ್ಯವಾಗಿದೆ.

**ಭಾರತೀಯ ಜನಸಮೂಹದಲ್ಲಿ ಹೆಚ್ಚುತ್ತಿರುವ ಸಾಕ್ಷರತಾ ಪ್ರಮಾಣ:–** ಭಾರತೀಯ ಜನಸಮೂಹದಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ. 1951ರಲ್ಲಿ 18.3% ರಷ್ಟಿದ್ದ ಸಾಕ್ಷರತೆ 1981ರಲ್ಲಿ 43.6%, 2011ರಲ್ಲಿ 74.04% ಕ್ಕೆ ಏರಿದೆ. 1952ರಲ್ಲಿ ಪುರುಷರ ಸಾಕ್ಷರತೆ 27.2% ಮಹಿಳಾ ಸಾಕ್ಷರತೆ 8.9% ಇದ್ದದ್ದು 2011ಕ್ಕೆ ಪುರುಷರ ಸಾಕ್ಷರತೆ 82.1% ಮಹಿಳಾ ಸಾಕ್ಷರತೆ 65.4%ಕ್ಕೆ ಏರಿಕೆಯಾಗಿದೆ

2. ರಾಷ್ಟ್ರೀಯ ಭಾವೈಕ್ಯತೆಯ ಸವಾಲುಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

1. ಪ್ರಾಂತೀಯತೆ 2. ಕೋಮುವಾದ 3. ಭಾಷಾವಾದ. 4. ಉಗ್ರವಾದ. 5. ಆತಂಕವಾದ

**ಪ್ರಾಂತೀಯತೆ:–** ರಾಷ್ಟ್ರೀಯ ಆಸಕ್ತಿಗಳನ್ನು ಅಲಕ್ಷಿಸುವಷ್ಟರ ಮಟ್ಟಿಗೆ ಜನರು ತಮ್ಮ ಪ್ರದೇಶದ ಬಗ್ಗೆ ಹೊಂದಿರುವ ನಿಷ್ಠೆ.

**ಕೋಮುವಾದ:–** ಒಂದು ಕೋಮು ಅಥವಾ ಧರ್ಮಕ್ಕೆ ಸೇರಿದ ಜನರು ಇನ್ನೊಂದು ಧರ್ಮದ ವಿರುದ್ಧ ಹೊಂದಿರುವ ದ್ವೇಷಪೂರಿತ ಭಾವನೆ.

**ಭಾಷಾವಾದ:–** ತಮ್ಮ ಭಾಷೆಯ ಬಗೆಗಿನ ವಿಶೇಷ ಒಲವು ಹಾಗೂ ಗೌರವಾಭಿಮಾನ ಮತ್ತು ಇತರ ಭಾಷೆಗಳ ಬಗೆಗಿನ ದ್ವೇಷ ಭಾವನೆ ಅಥವಾ ತಿರಸ್ಕಾರ.

**ಉಗ್ರವಾದ:–** ಉದ್ದೇಶವೊಂದನ್ನು ಸಾಧಿಸಿಕೊಳ್ಳಲು ಶಾಂತಿಯುತ, ಅಹಿಂಸಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಕ್ರಮಗಳಿಗೆ ವಿರುದ್ಧವಾದ ಹಿಂಸಾತ್ಮಕ ಹಾಗೂ ಹಾನಿಕಾರಕ ವಿಧಾನಗಳನ್ನು ಬಳಸಿಕೊಳ್ಳುವುದು.

**ಆತಂಕವಾದ:–** ರಾಜಕೀಯ ಉದ್ದೇಶಗಳಿಗೋಸ್ಕರ ಜನರ ಮನಸ್ಸಿನಲ್ಲಿ ಭಯವನ್ನು ಹುಟ್ಟಿಸುವುದರ ಮೂಲಕ ಸಂಘಟಿಸಿದ ಸಮೂಹವೊಂದು ಹಿಂಸಾಚಾರಕ್ಕಿಳಿಯುವುದು.

3. ಭಾರತದ ಏಕತೆಯ ಸ್ವರೂಪವನ್ನು ವಿವರಿಸಿ.

1. ಧಾರ್ಮಿಕ ಏಕತೆ. 2. ಭೌಗೋಳಿಕ ಏಕತೆ 3. ಸಾಂಸ್ಕೃತಿಕ ಏಕತೆ 4. ರಾಜಕೀಯ ಏಕತೆ.
5. ಭಾಷಾ ಏಕತೆ ಇವುಗಳನ್ನು ವಿವರಿಸುವುದು.

4. ಡಾ. ಬಿ.ಎಸ್.ಗುಹಾರವ ವರ್ಗೀಕರಿಸಿದ ಜನಾಂಗೀಯ ಸಮೂಹಗಳನ್ನು ವಿವರಿಸಿರಿ.

**ನೀಗ್ರಿಟೊಗಳು, ಪ್ರೋಟೊ ಆಸ್ಟ್ರೊಲಾಯ್ಡ್, ಮಂಗೋಲಾಯ್ಡರು, ಮೆಡಿಟೇರಿನಿಯನ್ನರು ನಾರ್ಡಿಕರು ಹಾಗೂ ಇಂಡೋ ಆರ್ಯನ್ನರು**

**ನೀಗ್ರಿಟೊಗಳು:–** ಭಾರತಕ್ಕೆ ಬಂದ ಅತ್ಯಂತ ಪ್ರಾಚೀನ ಜನಾಂಗ. ದಕ್ಷಿಣ ಭಾರತದ ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಅಂದಮಾನ್ ದ್ವೀಪಗಳಲ್ಲಿ ವಾಸ.

**ಪ್ರೋಟೊ ಆಸ್ಟ್ರೊಲಾಯ್ಡ್:–** ಮಧ್ಯಮ ಎತ್ತರ, ಕಪ್ಪು ಬಣ್ಣ, ಉದ್ದನೆಯ ತಲೆ ಇತ್ಯಾದಿ ಶಾರೀರಿಕ ಲಕ್ಷಣ ಹೊಂದಿದ್ದಾರೆ. ಮಧ್ಯ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

**ಮಂಗೋಲಾಯ್ಡರು:–** ಟಿಬೆಟೋ ಮತ್ತು ಪೆಲಿಯೋ ಇವರ ಉಪ ಗುಂಪುಗಳು. ಮಧ್ಯಮ ಎತ್ತರ, ಕಪ್ಪು ಬಣ್ಣ, ತೆಳ್ಳನೆಯ ಕೂದಲು ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ.

**ಮೆಡಿಟೇರಿನಿಯನ್ನರು:–** ಇವರಲ್ಲಿ ಮೂರು ಉಪಗುಂಪುಗಳಿವೆ. ನೈಜ, ಪೆಲಿಯೋ, ಪ್ರಾಚ್ಯ ಇವರು ಸಿಂಧೂಕಣಿವೆ ನಾಗರಿಕತೆ ಸೃಷ್ಟಿಕರ್ತರು. ಇವರು ನಾಗರೀಕತೆಯನ್ನು ಹರಪ್ಪಾ ಮತ್ತು ಮೆಹಂಜೋದಾರದಲ್ಲಿ ಬೆಳೆಸಿದರು.

**ಪಾಶ್ಚಾತ್ಯ ಬ್ರಾಕಿಸೆಪಾಲರು:–** ಉಪಗುಂಪುಗಳು ಆಲ್ಪನಾಯ್ಡ್, ಆರ್ಮನಾಯ್ಡ್, ಡಿನಾರಿಕ್. ಇವರು ಪಶ್ಚಿಮದ ಕಡೆಯಿಂದ ಭಾರತಕ್ಕೆ ಬಂದವರು.

**ನಾರ್ಡಿಕರು ಅಥವಾ ಇಂಡೋ ಆರ್ಯನ್ನರು:–** ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದವರು. ಇವರನ್ನು ಸಂಸ್ಕೃತ ಮಾತನಾಡುವ ಆರ್ಯನ್ನರೆನ್ನಲಾಗಿದೆ. ನೀಲಿಕಣ್ಣು, ಕಡಿಮೆ ಕೂದಲು, ಉದ್ದ ತಲೆ, ಬಿಳಿ ಮೈ ಬಣ್ಣದ ಶಾರೀರಿಕ ಲಕ್ಷಣ ಹೊಂದಿದ್ದಾರೆ.

5. ಭಾರತದ ವೈವಿಧ್ಯತೆಯ ಸ್ವರೂಪವನ್ನು ವಿವರಿಸಿ.

ಒಂದು ಜನ ಸಮುದಾಯದಲ್ಲಿನ ಭಾಷಾ, ಧಾರ್ಮಿಕ, ಜನಾಂಗೀಯ, ಭೌಗೋಳಿಕ ಮುಂತಾದ ಅಂಶಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ವೈವಿಧ್ಯತೆ ಎನ್ನುವರು

ಭಾರತದಲ್ಲಿ ಕಾಣುವ ವೈವಿಧ್ಯತೆಯ ವಿಧಗಳು:–

ಭೌಗೋಳಿಕ ವೈವಿಧ್ಯತೆ, ಜನಾಂಗೀಯ ವೈವಿಧ್ಯತೆ, ಭಾಷಾ ವೈವಿಧ್ಯತೆ, ಧಾರ್ಮಿಕ ವೈವಿಧ್ಯತೆ, ಸಾಂಸ್ಕೃತಿಕ ವೈವಿಧ್ಯತೆ.

1. **ಭೌಗೋಳಿಕ ವೈವಿಧ್ಯತೆ:** ಪರ್ವತಶ್ರೇಣಿ, ದಟ್ಟ ಅರಣ್ಯಗಳು, ನದಿಗಳು, ಮರುಭೂಮಿ, ಅತಿಹೆಚ್ಚು ಮಳೆಬೀಳುವ ಪ್ರದೇಶ ಹಾಗೂ ಅತಿ ಕಡಿಮೆ ಮಳೆ ಬೀಳುವಂತಹ ಪ್ರದೇಶಗಳನ್ನೊಳಗೊಂಡ ಅನೇಕ ಭೌಗೋಳಿಕ ವೈವಿಧ್ಯತೆಯನ್ನು ಭಾರತವು ಒಳಗೊಂಡಿದೆ.

Sreenivasa U K

2. **ಭಾಷಾ ವೈವಿಧ್ಯತೆಃ** ಕನ್ನಡ, ತೆಲುಗು ತಮಿಳು, ಮಲೆಯಾಳಿ, ಅಸ್ಸಾಮಿ, ಬೆಂಗಾಲಿ, ಗುಜರಾತಿಯನ್ನೊಳಗೊಂಡ ಸುಮಾರು 22 ಭಾಷೆಗಳನ್ನು ಭಾರತೀಯ ಸಂವಿಧಾನವು ಅಧಿಕೃತವೆಂದು ಘೋಷಿಸಿದೆ. ಅಲ್ಲದೆ 1652 ಆಡು ಭಾಷೆಗಳಿದ್ದು ಇಂಡೋ–ಆರ್ಯನ್, ದ್ರಾವಿಡಿಯನ್, ಆಸ್ಟ್ರಿಕ್, ಟಿಬೆಟೋ–ಬರ್ಮನ್ ಹಾಗೂ ಯುರೋಪಿಯನ್ ಭಾಷಾ ಸಮುದಾಯಗಳನ್ನೊಳಗೊಂಡ ಐದು ಪ್ರಮುಖ ಭಾಷಾ ವರ್ಗಗಳನ್ನು ಭಾರತದಲ್ಲಿ ಕಾಣಬಹುದು.
3. **ಧಾರ್ಮಿಕ ವೈವಿಧ್ಯತೆ :** ಹಿಂದೂ, ಕ್ರೈಸ್ತ, ಇಸ್ಲಾಂ, ಭೌದ್ಧ, ಜೈನ, ಸಿಖ್, ಹಾಗೂ ಯಹೂದಿಯರನ್ನೊಳಗೊಂಡ ಪ್ರಮುಖ ಧರ್ಮಗಳು ಭಾರದಲ್ಲಿ ಕಂಡುಬರುತ್ತವೆ.
4. **ಜನಾಂಗೀಯ ವೈವಿಧ್ಯತೆ :** ನೀಗ್ರಿಟೋಗಳು, ಪ್ರೋಟೋ–ಆಸ್ಟ್ರೋಲಾಯ್ಡ್, ಮಂಗೋಲಾಯ್ಡರು ಹಾಗೂ ಮೆಡಿಟೇರಿನಿಯನ್ನರು ನಾರ್ಡಿಕರು ಅಥವಾ ಇಂಡೋ ಆರ್ಯನ್ನರನ್ನೊಳಗೊಂಡ ಆರು ಪ್ರಮುಖ ಜನಾಂಗೀಯ ಸಮೂಹಗಳು ಭಾರತದಲ್ಲಿ ನೆಲೆಸಿವೆ.
5. **ಸಾಂಸ್ಕೃತಿಕ ವೈವಿಧ್ಯತೆಃ** ಸಂಸ್ಕೃತಿ, ಜೀವನ ವಿಧಾನಗಳು, ವರ್ತನಾ ಮಾದರಿಗಳು, ನಂಬಿಕೆಗಳು, ನೈತಿಕ ನಿಯಮಗಳು, ಆಹಾರ ಅಭ್ಯಾಸಗಳು ಉಡುಪು ಇನ್ನೂ ಮುಂತಾದವುಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನವಾರಿವುದನ್ನು ನಾವು ಭಾರತದಲ್ಲಿ ಕಾಣಬಹುದು.

6. ಭಾರತದ ಜನಸಂಖ್ಯಾನೀತಿಯನ್ನು ವಿವರಿಸಿ.

ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಜನಸಂಖ್ಯಾ ನೀತಿಯನ್ನು ಅಳವಡಿಸಿಕೊಂಡ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. 1952 ರಲ್ಲಿ ಭಾರತವು ಜನಸಂಖ್ಯಾ ನೀತಿಯನ್ನು ಅಳವಡಿಸಿಕೊಂಡು ನಂತರ 1977 ರಲ್ಲಿ ಕುಟುಂಬ ಕಲ್ಯಾಣ ಯೋಜನೆಯನ್ನು ಅಳವಡಿಸಿಕೊಂಡಿತು. ಈ ಯೋಜನೆಯ ಅನುಸಾರ ಮಗುವಿನಿಂದ ಮಗುವಿಗೆ ಅಂತರ ಕಾಪಾಡುವುದರ ಜೊತೆಗೆ **UNPF (United Nations Population Found** ಮಾಗದರ್ಶಿ ಸೂತ್ರವನ್ನು ಅಳವಡಿಸಿಕೊಂಡಿತು.

ರಾಷ್ಟ್ರೀಯ ಜನಸಂಖ್ಯಾ ನೀತಿ –2000. "ಒಟ್ಟು ಫಲವಂತಿಕೆ ದರ"ವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ. **ಉದ್ದೇಶಗಳುಃ**

1. ಶಿಶು ಮರಣ ದರವನ್ನು ಕಡಿಮೆ ಮಾಡುವುದು. 2) ಪ್ರಸವ ಸಂದರ್ಭದಲ್ಲಿ ತಾಯಂದಿರ ಮರಣದರವನ್ನು ಕಡಿತಗೊಳಿಸುವುದು. 3) ಎಲ್ಲಾ ಪ್ರಸವಗಳನ್ನು ಆಸ್ಪತ್ರೆಗಳಲ್ಲಿ ಮಾಡಿಸುವುದು. 4) ಜನಿಸಿದ ಎಲ್ಲಾ ಮಕ್ಕಳಿಗೂ ವೈದ್ಯಕೀಯ ಸೇವೆಗಳನ್ನು ನೀಡುವುದು. 5) ಜನನ, ಮರಣ ವಿವಾಹ ಹಾಗೂ ಗರ್ಭಧಾರಣೆಗೆ ಸಂಬಂದಿಸಿದವುಗಳನ್ನು ನೊಂದಣಿ ಮಾಡಿಸುವುದು.

7. ಶಿಕ್ಷಣವು ರಾಷ್ಟ್ರೀಯ ಭಾವೈಕ್ಯತೆಯನ್ನು ಹೆಚ್ಚಿಸುತ್ತದೆ? ವಿವರಿಸಿ.

ರಾಷ್ಟ್ರೀಯ ಭಾವೈಕ್ಯತೆನ್ನು ಮೂಡಿಸುವಲ್ಲಿ ಶಿಕ್ಷಣವು ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. 1961 ರಲ್ಲಿ ಡಾ. ಸಂಪೂರ್ಣಾನಂದರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಶಿಫಾರಸ್ಸುಗಳು

**1. ಪಠ್ಯಕ್ರಮದ ಪುನರ್ ರಚನೆಃ** ಪ್ರಾಥಮಿಕ ಮಾಧ್ಯಮಿಕ, ಕಾಲೇಜು ಮತ್ತು ವಿಶ್ವವಿದ್ಯಾಲಯ ಹಂತಗಳಲ್ಲಿ ಪಠ್ಯಕ್ರಮವನ್ನು ಪುನರ್ ರಚಿಸುವುದು. **2. ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹಃ** ಔಪಚಾರಿಕ ಶಿಕ್ಷಣದ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರೇರೇಪಿಸುವ ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು. **3. ಉತ್ತಮ ಪಠ್ಯಪುಸ್ತಕಗಳ ರಚನೆಃ** ವಿದ್ಯಾರ್ಥಿಗಳಲ್ಲಿ ನಿಜವಾದ ರಾಷ್ಟ್ರೀಯ ದೃಷ್ಟಿಕೋನವನ್ನು ಬೆಳೆಸಲು ಸಹಾಯಕವಾಗುವ ಪಠ್ಯಪುಸ್ತಕಗಳನ್ನು ರಚಿಸುವುದು. **4. ಸಾಮುದಾಯಿಕ ಪ್ರಾರ್ಥನೆಗಳುಃ** ಸಾಮೂಹಿಕ ಪ್ರಾರ್ಥನೆ, ಸಭೆಗಳು ಗೌರವಾನ್ವಿತ ನಾಯಕುರುಗಳಿಂದ ಸಾಮುದಾಯಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

8. ಆರ್ಯನೀಕರಣ ಪ್ರಕ್ರಿಯೆಯ ಕುರಿತು ಟಿಪ್ಪಣಿ ಬರೆಯಿರಿ.

1. ಇಂಡೋ ಆರ್ಯನ್ನರು ಮತ್ತು ಇಲ್ಲಿಯ ಮೂಲ ನಿವಾಸಿಗಳೊಂದಿಗೆ ಸಂಘರ್ಷ.
2. ಇಂಡೋ ಆರ್ಯನ್ನರು ಪಶುಗಾಹಿಗಳಾಗಿದ್ದು, ಕಾವ್ಯ, ತತ್ವಶಾಸ್ತ್ರ ಮತ್ತು ತತ್ವಾಚರಣೆಗಳಲ್ಲಿ ಒಲವುಳ್ಳವರಾಗಿದ್ದರು. 3. ಇವರು ತಮ್ಮನ್ನು ಶ್ರೇಷ್ಠರೆಂದು ಪರಿಗಣಿಸುವರಾಗಿದ್ದರು. 4. ಇಲ್ಲಿಯ ಮೂಲ ನಿವಾಸಿಗಳನ್ನು ಅವಹೇಳನಾತ್ಮಕವಾಗಿ ಪರಿಗಣಿಸುತ್ತಿರುವುದು. 5. ಇಂಡೋ ಆರ್ಯನ್ನರು ಮತ್ತು ಮೂಲ ನಿವಾಸಿಗಳ ನಡುವಿನ ಸಂಘರ್ಷ ಮತ್ತು ಸಂಬಂಧ (ಮುಂತಾದವುಗಳ ವಿವರಣೆ ನೀಡುವುದು.) **ತೊಡಕುಗಳುಃ** ಕೆಲ ಬುಡಕಟ್ಟು ಸಮೂಹಗಳು ಇಂಡೋ ಆರ್ಯನ್ನರೊಂದಿಗೆ ವಿಲೀನವಾಗಲು ನಿರಾಕರಿಸಿದರು. ಕೆಲವು ಪ್ರಬಲ ಜನಾಂಗೀಯ ಸಮೂಹಗಳು ಸ್ವಾಂಗೀಕರಣಕ್ಕೆ ಸಂಬಂಧಿಸಿದಂತೆ ಪ್ರಬಲ ವಿರೋಧ ಒಡ್ಡಿದರು.

## ಅಧ್ಯಾಯ : 2 ಸಾಮಾಜಿಕ ಅಸಮಾನತೆ, ಹೊರಗುಳಿಯುವಿಕೆ ಮತ್ತು ಒಳ್ಳಗೊಳ್ಳುವಿಕೆ

### ಒಂದು ಅಂಕದ ಪ್ರಶ್ನೆಗಳು

1. ಕರ್ನಾಟಕ ಸರ್ಕಾರ ನೇಮಿಸಿದ ಹಿಂದುಳಿದ ವರ್ಗಗಳ ಆಯೋಗದಲ್ಲಿ ಒಂದನ್ನು ಹೆಸರಿಸಿ.
   **ನಾಗನಗೌಡ ಆಯೋಗ, ಎಲ್.ಜಿ.ಹಾವನೂರ್ ಆಯೋಗ, ವೆಂಕಟಸ್ವಾಮಿ ಹಾಗೂ ಚಿನ್ನಪ್ಪರೆಡ್ಡಿ ಆಯೋಗ,**
2. ಹರಿಜನ ಎಂಬ ಪದವನ್ನು ಪರಿಚಯಿಸಿದವರಾರು?
   **ಗುಜರಾತಿನ ನರಸಿನ್ಹರಾವ್ ಮೆಹತಾ.**
3. 'ಕಾಸ್ಟ್'ಎಂಬ ಪದವು ಹೇಗೆ ಉತ್ಪತ್ತಿಯಾಗಿದೆ?
   **ಸ್ಪ್ಯಾನಿಷ್ ಮತ್ತು ಪೋರ್ಚ್‌ಗೀಸ್ ಭಾಷೆಯ 'ಕಾಸ್ಟಾ' (Casta) ಎಂಬ ಮೂಲ ಪದದಿಂದ ಜನಿಸಿದೆ**
4. ಜಾತಿ ಎಂಬ ಪದವು ಹೇಗೆ ಉತ್ಪತ್ತಿಯಾಗಿದೆ?
   **ಸ್ಪ್ಯಾನಿಷ್ ಮತ್ತು ಪೋರ್ಚ್‌ಗೀಸ್ ಭಾಷೆಯ 'ಕಾಸ್ಟಾ' (Casta) ಎಂಬ ಮೂಲ ಪದದಿಂದ ಜನಿಸಿದೆ**
5. ಭಾರತದ ಮೊದಲ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಯಾರು?
   **ಕಾಕಾ ಸಾಹೇಬ ಕಾಲೇಲ್ಕರ್ ಆಯೋಗ (1953)**
6. ಹರಿಜನ ಎಂಬ ಪದವನ್ನು ಜನಪ್ರಿಯಗೊಳಿಸಿದವರು ಯಾರು?
   **ಮಹಾತ್ಮ ಗಾಂಧಿಜಿಯವರು**
7. ಭಾರತ ಸಕಾರವು ನೇಮಿಸಿದ ಹಿಂದುಳಿದ ವರ್ಗಗಳ ಆಯೋಗದಲ್ಲಿ ಒಂದನ್ನು ಹೆಸರಿಸಿ.
   **ಕಾಕಾ ಸಾಹೇಬ ಕಾಲೇಲ್ಕರ್(1953) ಹಾಗೂ ಬಿ.ಪಿ.ಮಂಡಲ್(1979) ಆಯೋಗ**
8. ಪರಿಶಿಷ್ಟ ಜಾತಿ ಎಂಬ ಪದವನ್ನು ಪರಿಚಯಿಸಿದವರು ಯಾರು?
   **ಸೈಮನ್ ಆಯೋಗ (1928)ವು ಪರಿಚಯಿಸಿತು.**
9. ಪಕ್ಕಾ ಆಹಾರ ಎಂದರೇನು?
   **ಹಾಲು ಹಾಗೂ ಹಾಲಿನ ಉತ್ಪನ್ನಗಳಿಂದ ತಯಾರಿಸಿದ ಆಹಾರವನ್ನು ಪಕ್ಕಾ ಆಹಾರ ಎನ್ನುವರು.**
10. ಕಚ್ಚಾ ಆಹಾರ ಎಂದರೇನು?
    **ನೀರನ್ನು ಉಪಯೋಗಿಸಿ ತಯಾರಿಸಿದ ಆಹಾರವನ್ನು ಕಚ್ಚಾ ಆಹಾರ ಎಂದು ಕರೆಯುವರು.**

Sreenivasa UK

11. NEFA ವಿಸ್ತರಿಸಿ

**North East Frontier of Assam**

12. "Caste and race in India" ಗ್ರಂಥದ ಕರ್ತೃ ಯಾರು?

**"Caste and race in India" ಗ್ರಂಥವನ್ನು ಬರೆದವರು ಪ್ರೊ. ಜಿ. ಎಸ್. ಘುರ್ಯೆ**

13. ಹಿಸ್ಟರಿ ಆಫ್ ಕ್ಯಾಸ್ಟ್ ಇನ್ ಇಂಡಿಯಾ ಗ್ರಂಥದ ಲೇಖಕರು ಯಾರು?

**ಎಸ್.ವಿ.ಕೇತ್ಕರ್**

14. ಪೀಪಲ್ ಆಫ್ ಇಂಡಿಯಾ ಗ್ರಂಥದ ಲೇಖಕರು ಯಾರು?

**ಹರ್ಬಟ್ ರಿಸ್ಲೆ.**

15. ಪಂಚಶೀಲ ತತ್ವದ ಪ್ರತಿಪಾದಕರು ಯಾರು?

**ಜವಾಹರಲಾಲ್ ನೆಹರು**

16. ಪ್ರತ್ಯೇಕತೆಯ ನೀತಿಯನ್ನು ಪತಿಪಾದಿಸಿದವರು ಯಾರು?

**ಜೆ.ಹೆಚ್.ಹಟ್ಟನ್ ಮತ್ತು ವೀರಿಯರ್ ಎಲ್ವೀನ್.**

17. ಆದಿವಾಸಿಗಳನ್ನು ಹಿಂದುಳಿದ ಹಿಂದುಗಳು ಎಂದು ಕರೆದವರು ಯಾರು?

**ಜಿ.ಎಸ್.ಘುರ್ಯೆ**

## ಎರಡು ಅಂಕದ ಪ್ರಶ್ನೆಗಳು

1. ಪರಿಶಿಷ್ಟ ಜಾತಿಯವರ ಯಾವುದಾದರೂ ಎರಡು ಸಮಸ್ಯೆಗಳನ್ನು ತಿಳಿಸಿ.

**1. ಸಾಮಾಜಿಕ ಸಮಸ್ಯೆಗಳು. 2. ಆರ್ಥಿಕ ಸಮಸ್ಯೆಗಳು. 3. ಧಾರ್ಮಿಕ ಸಮಸ್ಯೆಗಳು.**

2. ಪ್ರಬಲ ಜಾತಿಯ ಯಾವುದಾದರೂ ಎರಡು ನಿರ್ಧಾರಕ ಅಂಶಗಳನ್ನು ತಿಳಿಸಿ.

**ಸಂಖ್ಯಾತ್ಮಕ ಪ್ರಬಲ ಜಾತಿ, ಆರ್ಥಿಕ ಅಂಶ, ಶೈಕ್ಷಣಿಕ ಅಂಶಗಳು ಹಾಗೂ ಧಾರ್ಮಿಕ ಅಂಶಗಳು,**

3. ಲಿಂಗ ಮತ್ತು ಲಿಂಗತ್ವವನ್ನು ವ್ಯಾಖ್ಯಾನಿಸಿ.

**ಲಿಂಗವು ಜೈವಿಕವಾಗಿದ್ದು, ಶಾರೀರಿಕ ಸ್ಥಿತಿಗಳಾದ ಸ್ತ್ರೀ ಅಥವಾ ಪುರುಷ ಲಿಂಗವನ್ನು ನಿರ್ಧರಿಸುತ್ತದೆ.**
**ಲಿಂಗತ್ವವು ಸಾಮಾಜಿಕವಾಗಿ ಹಾಗೂ ಮಾನಸಿಕವಾಗಿ ನಿರ್ಧಾರವಾಗುವಂತದ್ದು.**
**ಪುರುಷತ್ವ ಮತ್ತು ಸ್ತ್ರೀತ್ವದ ಲಕ್ಷಣಗಳನ್ನು ಮತ್ತು ಪಾತ್ರಗಳನ್ನು ಕುರಿತಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಗೃಹಿಕೆಗಳನ್ನು ಆಧರಿಸಿದೆ.**

4. ಸಾಮಾಜಿಕ ಅಸಮಾನತೆ ಎಂದರೇನು?

**ಸಾಮಾಜಿಕ ಸಂಪನ್ಮೂಲಗಳನ್ನು ಪಡೆಯಬಹುದಾದ ಮಾರ್ಗಗಳ ಅಸಮಾನ ಹಂಚಿಕೆಯನ್ನು ಸಾಮಾನ್ಯವಾಗಿ ಸಾಮಾಜಿಕ ಅಸಮಾನತೆ ಎನ್ನುವರು**

5. ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಎರಡು ಮಾನದಂಡವನ್ನು ತಿಳಿಸಿ.

**ಸಾಮಾಜಿಕ ಮಾನದಂಡ, ಶೈಕ್ಷಣಿಕ ಮಾನದಂಡ ಹಾಗೂ ಆರ್ಥಿಕ ಮಾನದಂಡ.**

6. ಕರ್ನಾಟಕದ ಎರಡು ಪ್ರಬಲ ಜಾತಿಗಳನ್ನು ಹೆಸರಿಸಿ.

**ಲಿಂಗಾಯತರು ಹಾಗೂ ಒಕ್ಕಲಿಗರು.**

7. ಯಾವುದಾದರೂ ಎರಡು ಸಮಾಜ ಸುಧಾರಣಾ ಆಂದೋಲನಗಳನ್ನು ತಿಳಿಸಿ.

**ಬ್ರಹ್ಮ ಸಮಾಜ, ಆರ್ಯ ಸಮಾಜ ಹಾಗೂ ಪ್ರಾರ್ಥನಾ ಸಮಾಜ.**

8. ಪ್ರಬಲ ಜಾತಿ ಎಂದರೇನು?

**ಸಂಖ್ಯಾತ್ಮಕ ಪ್ರಾಬಲ್ಯ ಹೊಂದಿ, ಆರ್ಥಿಕ, ರಾಜಕೀಯ ಹಾಗೂ ಸ್ಥಳಿಯ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಉನ್ನತ ಧಾರ್ಮಿಕ ಅಂತಸ್ತನ್ನು ಹೊಂದಿದ ಜಾತಿಯನ್ನು ಪ್ರಬಲ ಜಾತಿ ಎಂದು ಕರೆಯುವರು.**

9. ದಕ್ಷಿಣ ವಲಯದ ಯಾವುದಾದರೂ ಎರಡು ಬುಡಕಟ್ಟುಗಳನ್ನು ಹೆಸರಿಸಿ.

**ಸೋಲಿಗ, ಕಾಡುಕುರುಬ, ಚೆಂಚು, ಕೋಟಾ, ಕುರುಂಬ ಪಣಿಯ, ಯೆರವ ಹಾಗೂ ಹಕ್ಕಿಪಿಕ್ಕಿ.**

10. ಉತ್ತರ ಈಶಾನ್ಯ ವಲಯದ ಎರಡು ಬುಡಕಟ್ಟುಗಳನ್ನು ಹೆಸರಿಸಿ.

**ಗುರುಂಗ್, ಲಿಂಬು, ಲೆಪ್ಚಾ, ಅಕಾ, ಮಿಶಿಮಿ,ಮಿಕಿರ್, ಗಾರೋ, ಖಾಸಿ, ಅಂಗಾಮಿ ಹಾಗೂ ನಾಗಾ.**

11. ಮಧ್ಯ ವಲಯದ ಎರಡು ಬುಡಕಟ್ಟುಗಳನ್ನು ಹೆಸರಿಸಿ.

**ಗೊಂಡರು, ಭಿಲ್ಲರು, ಸಂತಾಲರು, ಹೋ, ಖೋಂಡ್, ಖಾರಿಯಾ ಹಾಗೂ ಮುಂಡಾ.**

12. ಕರ್ನಾಟಕದ ಯಾವುದಾದರೂ ಎರಡು ಪರಿಶಿಷ್ಟ ಜಾತಿಗಳನ್ನು ಹೆಸರಿಸಿರಿ.

**ಆದಿ ದ್ರಾವಿಡ, ಆದಿ ಕರ್ನಾಟಕ,ಮಾದಿಗ ಚಮ್ಮಾರ. ಲಂಬಾಣಿ ಹಾಗೂ ಬೋವಿ.**

13. ಕರ್ನಾಟಕದ ಯಾವುದಾದರೂ ಎರಡು ಹಿಂದುಳಿದ ವರ್ಗಗಳ ಆಯೋಗಗಳನ್ನು ಹೆಸರಿಸಿ.

**ನಾಗನಗೌಡ ಆಯೋಗ, ಎಲ್.ಜಿ.ಹಾವನೂರ್ ಆಯೋಗ, ವೆಂಕಟಸ್ವಾಮಿ ಹಾಗೂ ಚಿನ್ನಪ್ಪರೆಡ್ಡಿ ಆಯೋಗ,**

14. **LAMPS** ಅನ್ನು ವಿಸ್ತರಿಸಿ.

**Large Are Multi-Purpose Societies.**

15. ಹಿಂದುಳಿದ ಜಾತಿ ಅಥವಾ ವರ್ಗವನ್ನು ವ್ಯಾಖ್ಯಾನಿಸಿ.

**ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಯಾವ ಜಾತಿ ಸಮುದಾಯಗಳು ಹಿಂದುಳಿದಿವಿಯೊ ಅಂತಹ ಜಾತಿಗಳನ್ನು ಹಿಂದುಳಿದ ಜಾತಿ ಎನ್ನುವರು.**

16. ಪರಿಶಿಷ್ಟ ಜಾತಿ ಎಂದರೇನು?

**ಮೇಲ್ಜಾತಿಯವರಿಂದ ಸಾಮಾಜಿಕ ಹಾಗೂ ರಾಜಕೀಯ ಅನರ್ಹತೆಗಳಿಗೆ ಒಳಗಾದ ಅಸ್ಪೃಶ್ಯ ಜಾತಿಗಳೇ ಪರಿಶಿಷ್ಟ ಜಾತಿಗಳು ಎನ್ನುವರು.**

17. ಬುಡಕಟ್ಟು ಸಮುದಾಯ ಎಂದರೇನು?

**ಸಾಮಾನ್ಯ ಹೆಸರು, ಭಾಷೆ, ವೃತ್ತಿ ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ವಸಿಸುವ ಮತ್ತು ಸಾಮಾನ್ಯವಾಗಿ ಒಳಬಾಂಧವ್ಯ ಸಮೂಹವಾಗಿರುವ ಕುಟುಂಬಗಳ ಸಂಗ್ರಹವೇ ಬುಡಕಟ್ಟು ಸಮೂಹವಾಗಿದೆ.**

18. ಬುಡಕಟ್ಟು ಪಂಗಡಗಳ ಮೂರು ವಲಯಗಳನ್ನು ತಿಳಿಸಿ.

**ಉತ್ತರ ಈಶಾನ್ಯ ವಲಯ, ಮಧ್ಯ ವಲಯ ಹಾಗೂ ದಕ್ಷಿಣ ವಲಯ.**

19. ಕೆನೆ ಪದರ ಎಂದರೇನು?

**ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕೆಲ ಜಾತಿ/ವರ್ಗಗಳನ್ನು ಮೀಸಲಾತಿ ಕೋಟಾದಿಂದ ಹೊರಗಿಡಲಾಯಿತು. ಇಂತಹ ವರ್ಗವನ್ನು ಕೆನೆ ಪದರವೆಂದು ಪರಿಗಣಿಸಲಾಯಿತು.**

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಬುಡಕಟ್ಟು ಪಂಚಶೀಲವನ್ನು ವಿವರಿಸಿ.

ಜವಾಹರಲಾಲ್ ನೆಹರು ಅವರು ವೆರಿಯ ಎಲ್ವಿನ್ ಅವರ **'ದಿ ಫಿಲಾಸಫಿ ಆಫ್ ನೇಫಾ'** ಎಂಬ ಕೃತಿಗೆ ಬರೆದ ಮುನ್ನುಡಿಯಲ್ಲಿ ಐಕ್ಯತೆಯ ನೀತಿಯ ಪರಿಪಾಲನೆಯ ಐದು ಮೂಲ ತತ್ವಗಳನ್ನು ಸೂಚಿಸಿದ್ದಾರೆ.

1. ಬುಡಕಟ್ಟು ಸಮೂಹಗಳು ತಮ್ಮದೇ ಆದ ಬುದ್ಧಿಮತ್ತೆಯಲ್ಲಿ ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸಬೇಕು. ಅವರ ಜೀವನ ವಿಧಾನದ ಮೇಲೆ ಯಾವುದನ್ನು ಬಲವಂತವಾಗಿ ಹೇರಕೂಡದು. ಅವರ ಸಾಂಪ್ರದಾಯಿಕ ಕಲೆ ಮತ್ತು ಸಂಸ್ಕೃತಿಯನ್ನು ಎಲ್ಲ ವಿಧದಲ್ಲೂ ಪ್ರೋತ್ಸಾಹಿಸಬೇಕು.
2. ಭೂಮಿ ಮತ್ತು ಅರಣ್ಯಗಳ ವಿಚಾರದಲ್ಲಿ ಬುಡಕಟ್ಟುಗಳ ಹಕ್ಕುಗಳನ್ನು ಗೌರವಿಸಬೇಕು.

Sreenivasa U K

3. ಅವರ ಆಡಳಿತ ಅಭಿವೃದ್ಧಿಗೆಳಿಗೆ ಸಂಭಂಧಿಸಿದಂತೆ ಅವರಿಗೆ ತರಬೇತಿ ನೀಡಿ ಅವರದೇ ತಂಡವನ್ನು ಕಟ್ಟಬೇಕು. ಪ್ರಾರಂಭಿಕ ಹಂತದಲ್ಲಿ ಹೊರಗಿನ ತಂತ್ರಜ್ಞರ ನೆರವು ಅಗತ್ಯವಾಗಬಹುದು. ಆದರೆ ಬುಡಕಟ್ಟು ಪ್ರದೇಶಗಳಲ್ಲಿ ಹೊರಗಿನವರ ಪ್ರದೇಶವನ್ನು ಸಾಧ್ಯವಾದಷ್ಟು ತಪ್ಪಿಸಬೇಕು.

4. ಬುಡಕಟ್ಟು ಪ್ರದೇಶಗಳಲ್ಲಿ ಅತಿಯಾದ ಆಡಳಿತ ಅಥವಾ ಹಲವಾರು ಯೋಜನೆಗಳನ್ನು ಕೈಗೊಳ್ಳಬಾರದು. ಅವರಿಗೆ ಪೂರಕವಾಗಿ ಕೆಲಸ ಮಾಡಬೇಕಲ್ಲದೆ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ವಿರುದ್ಧವಾಗಿ ಕೆಲಸ ಮಾಡಬಾರದು.

5. ಅವರ ಪರವಾದ ಕಾರ್ಯಕ್ರಮಗಳ ಫಲಿತಾಂಶಗಳನ್ನು ಕೇವಲ ಅಂಕಿಸಂಖ್ಯೆಗಳಿಂದ ಅಥವಾ ಖರ್ಚು ಮಾಡಿದ ಹಣದಿಂದ ಅಳೆಯದೆ ಗುಣಮಟ್ಟದಿಂದ ಅಳೆಯಬೇಕು.

2. ಮಂಡಲ್ ಆಯೋಗದ ಪ್ರಕಾರ ಹಿಂದುಳಿದಿರುವಿಕೆಯ ಆಧಾರಾಂಶಗಳನ್ನು ವಿವರಿಸಿ.

1979ರಲ್ಲಿ ಬಿ. ಪಿ. ಮಂಡಲ್ ಅಧ್ಯಕ್ಷತೆಯಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗ ರಚಿಸಲಾಯಿತು. ಈ ಆಯೋಗವು 3743 ಜಾತಿಗಳನ್ನು ಮತ್ತು ಸಮುದಾಯಗಳನ್ನು ಪಟ್ಟಿಮಾಡಿತು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಜನರನ್ನು ನಿರ್ಧರಿಸಲು ಮಾನದಂಡ ಗುರುತಿಸಿತು. ಪ್ರತಿ ಮಾನದಂಡಕ್ಕೆ ಅಂಶಗಳು ಹಾಗೂ ಸೂಚ್ಯಂಕಗಳನ್ನು ಗುರುತಿಸಿತು.

**1. ಸಾಮಾಜಿಕ ಮಾನದಂಡ: a)** ಇತರರು ಪರಿಗಣಿಸುವಂತೆ ಸಾಮಾಜಿಕವಾಗಿ ಹಿಂದುಳಿದಿರುವಿಕೆ, **b)** ದೈಹಿಕ ಶ್ರಮವನ್ನು ಹೆಚ್ಚು ಅವಲಂಬಿಸಿರುವುದು, **c)** ಬಾಲ್ಯ ವಿವಾಹ ಹೆಚ್ಚು ಹೊಂದಿರುವ ಜಾತಿ **d)** ಸಮೂಹಗಳು, ಅಧಿಕ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು.

**2. ಶೈಕ್ಷಣಿಕ ಮಾನದಂಡ: a)** ಶೇ 25% ಕ್ಕೂ ಅಧಿಕ ಮಕ್ಕಳು ಶಾಲೆಗೆ ಹೋಗದಿರುವುದು, **b)** ಶೇ25%ಕ್ಕೂ ಅಧಿಕ ಮಕ್ಕಳು ಅರ್ಧದಲ್ಲಿ ಶಾಲೆ ಬಿಡುವುದು, **c)** ಶೇ 25% ಕ್ಕೂ ಅಧಿಕ ಸಂಖ್ಯೆಯ ಜನ ಮೆಟ್ರಿಕ್ ಶಿಕ್ಷಣ ಪಡೆಯದಿರುವುದು.

**3. ಆರ್ಥಿಕ ಮಾನದಂಡ: a)** ಕುಟುಂಬದ ಆಸ್ತಿ ಮೌಲ್ಯವು ಶೇ 25% ಕ್ಕೂ ಕಡಿಮೆ ಇರುವುದು, **b)**ಶೇ 25% ಕ್ಕೂ ಅಧಿಕ ಜನ ಕಚ್ಚಾ ಮನೆಗಳಲ್ಲಿ ವಾಸಿಸುವುದು, **c)** ಶೇ 25%ಕ್ಕೂ ಅಧಿಕ ಮನೆಗಳ ಜನರು ಕುಡಿಯುವ ನೀರಿಗಾಗಿ ಕನಿಷ್ಠ 500 ಮೀಟರ್‌ಗಿಂತ ದೂರವಿರುವುದು. ಹಾಗೂ **a)** ಶೇ 25%ಕ್ಕೂ ಅಧಿಕ ಕುಟುಂಬಗಳು ಸಾಲಪಡೆದಿರುವುದು. **ಒಟ್ಟು 22 ಸೂಚ್ಯಂಕ. 11ಕ್ಕಿಂತ ಹೆಚ್ಚು ಸೂಚ್ಯಂಕಗಳನ್ನು ಪಡೆದ ಯಾವುದೇ ಜಾತಿ/ಸಮುದಾಯವನ್ನು ಹಿಂದುಳಿದ ವರ್ಗವಾಗಿ ಪರಿಗಣಿಸಲಾಗುತ್ತಿತ್ತು.**

3. ಬ್ರಿಟೀಷ್ ಅವಧಿಯಲ್ಲಿ ಜಾತಿ ವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಬ್ರಿಟೀಷರು ಭಾರತದಲ್ಲಿ ಆಡಳಿತ ನಡೆಸುವಾಗ ತಮ್ಮೊಂದಿಗೆ ತಮ್ಮದೇ ಆದ ಸರಕಾರ, ಸಾಂಪ್ರದಾಯಿಕ ನಮೂನೆ ಮತ್ತು ಸಂಸ್ಕೃತಿಯನ್ನು ತಂದರು. ಅವರು ಪರಿಚಯಿಸಿದ ಆಡಳಿತಾತ್ಮಕ, ಕಾನೂನಾತ್ಮಕ, ಸಾಮಾಜಿಕ ಹಾಗೂ ಆರ್ಥಿಕ ನೀತಿಗಳು ಭಾರತದ ತತ್ವಾದರ್ಶದಲ್ಲಿ ಮಾತ್ರವಲ್ಲದೆ ಜಾತಿ ವ್ಯವಸ್ಥೆಯಲ್ಲೂ ಕೂಡ ಬದಲಾವಣೆ ತಂದವು. ಅವುಗಳೆಂದರೆ

**1) ಸಾರ್ವತ್ರಿಕ ಕಾನೂನು ವ್ಯವಸ್ಥೆಯ ಪರಿಚಯ:** ಸಾಂಪ್ರದಾಯಿಕ ಜಾತಿ ಪಂಚಾಯತಿಗಳು ನಶಿಸಿ ಹೊಸ ಕಾನೂನುಗಳಾದ 1850ರ ಜಾತಿ ದೌರ್ಬಲ್ಯಗಳ ನಿವಾರಣಾ ಕಾಯ್ದೆ, 1856 ಹಿಂದೂ ವಿವಾಹ ಕಾಯ್ದೆ, 1872ರ ವಿಶೇಷ ವಿವಾಹ ಕಾಯ್ದೆಗಳು ಅನುಷ್ಠಾನಗೊಂಡವು. **2) ಸಮಾಜ ಸುಧಾರಣಾ ಚಳುವಳಿಗಳ ಪ್ರಭಾವ:** ಜಾತಿ ನಿರ್ಮೂಲನೆ ಮಾಡಲು ಹಾಗೂ ವರ್ಗರಹಿತ ಸಮಾಜಗಳ ಸೃಷ್ಟಿಗೆ ಬ್ರಿಟೀಷರಿಂದ ಪ್ರಭಾವಿತಗೊಂಡ ರಾಜರಾಮ್ ಮೋಹನ್ ರಾಯ್ ರವರ ಬ್ರಹ್ಮ ಸಮಾಜ, ಆತ್ಮರಾಮ ಪಾಂಡುರಂಗರವರ ಪ್ರಾರ್ಥನಾ ಸಮಾಜ, ಸ್ವಾಮಿ ದಯಾನಂದ ಸರಸ್ವತಿಯರ ಆರ್ಯಸಮಾಜ ಹಾಗೂ ಸ್ವಾಮಿ ವಿವೇಕಾನಂದರವರಿಂದ ಆರಂಭಗೊಂಡ ಶ್ರೀ ರಾಮಕೃಷ್ಣ ಮಿಶನ್‌ಗಳು ಆರಂಭವಾದವು. **3) ಆಂಗ್ಲ ಶಿಕ್ಷಣದ ಪ್ರಭಾವ. 4) ಹೊಸ ಸಾಮಾಜಿಕ ಸಂಘಟನೆಗಳ ಪ್ರಭಾವ. 5) ಸ್ವಾತಂತ್ರ್ಯ ಚಳುವಳಿಯ ಪ್ರಭಾವ. 6) ಔದ್ಯೋಗೀಕರಣ ಮತ್ತು ನಗರೀಕರಣ ಪ್ರಭಾವ.**

4. ಭಾರತದಲ್ಲಿ ಬುಡಕಟ್ಟು ಜನಾಂಗಗಳ ಭೌಗೋಳಿಕ ಹಂಚಿಕೆಯನ್ನು ವಿವರಿಸಿ.

ಭಾರತೀಯ ಸಮಾಜದ ಅವಿಭಾಜ್ಯ ಅಂಗವಾದ ಬುಡಕಟ್ಟುಗಳು ಭಾರತದ ಉದ್ದಗಲಕ್ಕೂ ವ್ಯಾಪಿಸಿದ್ದಾರೆ. ಅವರನ್ನು ಮೂರು ಕ್ಷೇತ್ರೀಯ ವಲಯಗಳಲ್ಲಿ ವರ್ಗಿಕರಿಸಲಾಗಿದೆ.

1. **ಉತ್ತರ ಹಾಗೂ ಈಶಾನ್ಯ ವಲಯ:-** ಉಪಹಿಮಾಲಯ ಪ್ರಾಂತ, ಈಶಾನ್ಯ ಗಡಿ ಲೆಸ್ತಾ ಕಣಿವೆ, ಜಮುನಾಪದ್ಮ ಹಾಗೂ ಬ್ರಹ್ಮಪುತ್ರ ನದಿಯ ದಂಡೆಯಲ್ಲಿ ಕಂಡು ಬರುತ್ತಾರೆ. ಮಂಗೋಲಾಯ್ಡ್ ಜನಾಂಗಿಯ ಸಮೂಹಕ್ಕೆ ಸೇರಿದ ಬುಡಕಟ್ಟು ಸಮುದಾಯಗಳಾಗಿವೆ. ಗುರಂಗ, ಲಿಂಬು, ಲೆಪ್ಚಾ, ಗಾರೊ, ಖಾಸಿ, ನಾಗಾ, ಅಂಗಾಮಿ ಇತ್ಯಾದಿ.

**2. ಮಧ್ಯವಲಯ:-** ಉತ್ತರ ಭಾಗದ ಗಂಗಾ ನದಿ ತಟದ ಪ್ರಸ್ಥಭೂಮಿ ದಕ್ಷಿಣ ಕೃಷ್ಣಾ ನದಿಯ ಪ್ರಸ್ಥಭೂಮಿ ಪಶ್ಚಿಮ ಬಂಗಾಳ, ಓಡಿಶಾ, ರಾಜಸ್ಥಾನ, ಗುಜರಾತ, ಮಧ್ಯ ಪ್ರದೇಶ. ಈ ಭಾಗದಲ್ಲಿ ಕಂಡುಬರುವ ಪ್ರಮುಖ ಬುಡಕಟ್ಟುಗಳೆಂದರೆ ಗೊಂಡ, ಭಿಲ್, ಸಂತಾಲ, ಹೋ, ಮುಂಡ, ಖೊಂಡ್, ಖಾರಿಯಾ ಇತ್ಯಾದಿ.

3. **ದಕ್ಷಿಣ ವಲಯ:-** ಆಂಧ್ರ, ತಮಿಳನಾಡು, ಕರ್ನಾಟಕ, ಕೇರಳ, ಅಂಡಮಾನ್ ನಿಕೋಬಾರ್ ದ್ವೀಪಗಳು. ಈ ಭಾಗದಲ್ಲಿ ಕಂಡುಬರುವ ಪ್ರಮುಖ ಬುಡಕಟ್ಟುಗಳೆಂದರೆ ಕಾಡು ಕುರುಬ, ಜೇನು ಕುರುಬ, ಹಕ್ಕಿಪಿಕ್ಕಿ, ಸೋಲಿಗ, ಚೆಂಚು, ತೋಡ, ಇರುಳಾ, ಕಾಡರ್ ಇತ್ಯಾದಿ.

5. ಸ್ವಾತಂತ್ರ್ಯದ ನಂತರ ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಾದ ಪರಿವರ್ತನೆಗಳನ್ನು ವಿವರಿಸಿರಿ.

**1 ಜಾತಿ ವ್ಯವಸ್ಥೆಯಲ್ಲಾದ ಕಾರ್ಯಾತ್ಮಕ ಬದಲಾವಣೆಗಳು.**

1) ಮುಕ್ತವಾದ ವೃತ್ತಿ ಆಯ್ಕೆಗಳು 2) ಜಾತಿ ಪಂಚಾಯತಿಗಳ ಕ್ಷೀಣಿಸುವಿಕೆ. 3) ಸಹಭೋಜನ ನಿರ್ಬಂಧಗಳು ಸಡಿಲಗೊಂಡಿವೆ. 4) ಜಾತಿಗಳು ದೈವಸೃಷ್ಟಿ ಎನ್ನುವ ನಂಬಿಕೆ ಬದಲಾಗಿದ್ದು ಜಾತಿ ಸಂಬಂಧಿತ ನಿರ್ಬಂಧಗಳು ಕಡಿಮೆಯಾಗಿದೆ. 5) ವ್ಯಕ್ತಿ ಸ್ವಾತಂತ್ರ್ಯಕ್ಕೆ ದೊರೆತ ಪ್ರಾಧಾನ್ಯತೆಯಿಂದಾಗಿ ಜಾತಿಯು ವ್ಯಕ್ತಿಯ ಮೇಲೆ ಹೊಂದಿದ್ದ ವೃತ್ತಿ ನಿರ್ಬಂಧಗಳು ಕಡಿಮೆಯಾಗಿವೆ. ಕೆಳ ಹಂತದಲ್ಲಿ ಜಾತಿ ಆಧಾರಿತ ಸಾಮಾಜಿಕ ಅಂತಸ್ತು ಇನ್ನೂ ಕೂಡ ಅಸ್ತಿತ್ವದಲ್ಲಿದೆ.

**2. ಜಾತಿ ವ್ಯವಸ್ಥೆಯ ಪಾತ್ರದಲ್ಲಾದ ಬದಲಾವಣೆಗಳು.**

1) ಚುನಾವಣೆಗಳಲ್ಲಿ ಜಾತಿ. 2) ಹೆಚ್ಚುತ್ತಿರುವ ಜಾತಿಪ್ರಜ್ಞೆ ಮತ್ತು ಜಾತಿ ಸಂಘಟನೆಗಳು.3) ಆಧುನಿಕ ಸಂಪರ್ಕ ಹಾಗೂ ಸಂವಹನ ಮಾಧ್ಯಮಗಳ ಪ್ರಭಾವ. 4) ಆಧುನಿಕ ಶಿಕ್ಷಣದ ಪ್ರಭಾವ.

6. ಪರಿಶಿಷ್ಟ ಜಾತಿಗಳ ಸಮಸ್ಯೆಗಳನ್ನು ವಿವರಿಸಿ.

1) **ಸಾಮಾಜಿಕ ದೌರ್ಬಲ್ಯಗಳು:** ಸಾರ್ವಜನಿಕ ಸೌಲಭ್ಯಗಳ ಬಳಕೆಗೆ ಸೀಮಿತ ಅವಕಾಶಗಳಿದ್ದವು, ಅವರ ಸಂಚಾರಕ್ಕೆ ಮುಕ್ತ ಅವಕಾಶವಿರಲಿಲ ಹಾಗೂ ಉನ್ನತ ಜಾತಿಯವರ ಮನೆ ಹತ್ತಿರ ಸಂಚಾರಕ್ಕೂ ಸಹ ನಿರ್ಬಂಧವಿತ್ತು.

2) **ಆರ್ಥಿಕ ದೌರ್ಬಲ್ಯಗಳು:** ಉನ್ನತ ಅಂತಸ್ತಿನ ಕೆಲಸ ಮತ್ತು ಲಾಭದಾಯಕ ವೃತ್ತಿಯಿಂದ ದೂರವಿಡುವುದು ಹಾಗೂ ಕೊಳಕು ವೃತ್ತಿಗಳಿಗೆ ಸೀಮಿತಗೊಳಿಸುವುದು, ಉನ್ನತ ಜಾತಿಯವರ ಮನೆಗೆಲಸಗಳನ್ನು ಉಚಿತವಾಗಿ ಹಾಗೂ ಅವರಿಗೆ ಎಲ್ಲಾ ಬಗೆಯ ದೈಹಿಕ ಕೆಲಸಗಳನ್ನು

Sreenivasa U K

ಮಾಡಬೇಕಾಗಿತ್ತು, ಕುದುರೆ ಸವಾರಿ, ಬೈಸಿಕಲ್ ಸವಾರಿ ಚಿನ್ನಾಭರಣ ಧರಿಸುವುದು ಇನ್ನೂ ಮುಂತಾದವುಗಳ ಮೇಲೆ ನಿರ್ಷೇಧವನ್ನು ಹೇರಲಾಗಿತ್ತು.

3) **ಧಾರ್ಮಿಕ ದೌರ್ಬಲ್ಯಗಳು:** ದೇವಾಲಯಗಳು ಹಾಗೂ ಮಠಗಳ ಪ್ರವೇಶ ನಿಷೇಧ, ಪವಿತ್ರ ಗ್ರಂಥಗಳ ಪಠಣ ಹಾಗೂ ಧಾರ್ಮಿಕ ಮಂತ್ರಗಳ ಪಠಣವನ್ನು ನಿಷೇಧಿಸಲಾಗಿತ್ತು.

7. ಬುಡಕಟ್ಟು ಕಲ್ಯಾಣದ ಮೂರು ದೃಷ್ಟಿಕೋನಗಳನ್ನು ಚರ್ಚಿಸಿ.

**1. ಪ್ರತ್ಯೇಕತೆಯ ನೀತಿ:** ಈ ದೃಷ್ಟಿಕೋನವು ಬುಡಕಟ್ಟು ಜನರನ್ನು ಪ್ರತ್ಯೇಕವಾಗಿಸಬೇಕೆಂದು ಪ್ರತಿಪಾದಿಸುತ್ತದೆ. ಅನ್ಯ ಸಂಸ್ಕೃತಿಯ ಪ್ರಭಾವವನ್ನು ತಪ್ಪಿಸಿ ಅವರಿಗಾಗಿ ಸ್ವಯಮಾಡಳಿತ ಪ್ರದೇಶಗಳನ್ನು ನಿರ್ಮಿಸಬೇಕೆಂದು ಸಲಹೆ ನೀಡಿದರು. ಈ ನೀತಿಯ ಪ್ರಮುಖ ಪ್ರತಿಪಾದಕರೆಂದರೆ ಜೆ. ಎಚ್. ಹಟನ್ ಮತ್ತು ವೆರಿಯ ಎಲ್ವಿನ್

**2. ಸ್ವಾಂಗೀಕರಣದ ನೀತಿ:** ಬುಡಕಟ್ಟು ಸಮೂಹಗಳು ಕ್ರೈಸ್ತ ಅಥವಾ ಹಿಂದೂ ಧರ್ಮಕ್ಕೆ ಸ್ವಾಂಗೀಕರಣಗೊಳ್ಳಬೇಕೆನ್ನುವುದು ಈ ನೀತಿಯ ಪ್ರಮುಖ ಅಂಶವಾಗಿದೆ. ಈ ನೀತಿಯ ಪ್ರಮುಖ ಪ್ರತಿಪಾದಕರೆಂದರೆ ಠಕ್ಕರ ಬಾಪಾ ಹಾಗೂ ಜಿ. ಎಸ್. ಘುರ್ಯೆರವರಾಗಿದ್ದಾರೆ.

**3. ಐಕ್ಯತೆಯ ನೀತಿ:** ಮುಂದುವರೆದ ಸಮಾಜದ ಲಾಭವನ್ನು ಪಡೆದುಕೊಂಡು ತಮ್ಮ ಪ್ರತ್ಯೇಕ ಅನನ್ಯತೆಯನ್ನು ಉಳಿಸಿಕೊಳ್ಳುವುದು ಐಕ್ಯತೆಯ ನೀತಿಯ ಪ್ರತಿಪಾದನೆಯಾಗಿದೆ. ಈ ನೀತಿಯ ಪ್ರಮುಖ ಪ್ರತಿಪಾದಕರೆಂದರೆ ಜವಾಹರಲಾಲ್ ನೆಹರು, ಎಂ. ಎನ್. ಶ್ರೀನಿವಾಸ, ಹಾಗೂ ಡಿ. ಎನ್ ಮುಜಂದಾರ್‌ರವರಾಗಿದ್ದಾರೆ.

8. ಜಾತಿ ಪದ್ಧತಿಯ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

ಜಾತಿ ಎನ್ನುವ ಪದವು ಇಂಗ್ಲೀಷ್ ಭಾಷೆಯ 'ಕಾಸ್ಟ್' ಎನ್ನುವ ಪದಕ್ಕೆ ಸಮಾನಾಗಿದ್ದು, 'ಕಾಸ್ಟ್' ಎನ್ನುವ ಪದವು ಸ್ಪ್ಯಾನಿಷ್ ಮತ್ತು ಗ್ರೀಕ್ ಭಾಷೆಯ 'ಕಾಸ್ಟಾ' ಎನ್ನುವ ಮೂಲ ಪದದಿಂದ ಜನಿಸಿದೆ. 'ಕಾಸ್ಟಾ' ಅಂದರೆ 'ತಳಿ', 'ಅನುವಂಶಿಯತೆ', 'ಜನಾಂಗ' ಎನ್ನುವ ಅರ್ಥ ನೀಡುತ್ತದೆ.

"ಸಾಮಾನ್ಯ ಹೆಸರು, ಪುರಾಣಪುರುಷನೊಬ್ಬನ ಮೂಲವುಳ್ಳ ವಂಶಾವಳಿಯ ಆಧಾರ, ಒಂದೇ ವೃತ್ತಿಯನ್ನು ಕೈಗೊಳ್ಳುವ ಏಕರೂಪಿ ಸಮುದಾಯವನ್ನೇ ಜಾತಿ" ಎಂದು ಹರ್ಬರ್ಟ್ ರಿಸ್ಲೆರವರು ಕರೆದಿದ್ದಾರೆ

ಜಿ.ಎಸ್.ಘುರ್ಯೆಯವರು ತಮ್ಮ **"ಕಾಸ್ಟ್ ಆಂಡ್ ರೇಸ್ ಇನ್ ಇಂಡಿಯಾ"** ಎನ್ನುವ ಗ್ರಂಥದಲ್ಲಿ **ಜಾತಿಯ ಪ್ರಮುಖ ಲಕ್ಷಣಗಳನ್ನು** ಹೀಗೆ ಗುರುತಿಸಿದ್ದಾರೆ.

**1. ಜಾತಿಯು ಸಮಾಜದ ಹೋಳು ಹೋಳಾದ ಭಾಗವಾಗಿದೆ:** ಸಮಾಜವು ವಿವಿಧ ಜಾತಿ ಸಮೂಹಗಳಾಗಿ ವಿಭಜಿತವಾಗಿದ್ದು, ಪ್ರತಿಯೊಂದು ಜಾತಿಯು ತನ್ನದೇ ಆದ ಜೀವನ ವಿಧಾನವನ್ನು ಹೊಂದಿದೆ. **2) ಜಾತಿಯು ಜನ್ಮದತ್ತವಾದುದು:** ಜಾತಿಯ ಸದಸ್ಯತ್ವವು ವ್ಯಕ್ತಿಗಳಿಗೆ ಹುಟ್ಟಿನಿಂದ ನಿರ್ಧಾರಿತಗೊಂಡು ಅನುವಂಶಿಯ (ಆರೋಪಿತ) ಅಂತಸ್ತನ್ನು ಒದಗಿಸುತ್ತದೆ. ಜಾತಿ ಸಂಬಂಧಿತ ಸಾಮಾಜಿಕ ಅಂತಸ್ತು ಹುಟ್ಟಿನಿಂದಲೇ ಪಡೆಯುತ್ತಾನೆ. **3) ಜಾತಿ ಪಂಚಾಯಿತಿಯನ್ನು ಹೊಂದಿದೆ:** ಪ್ರತಿಯೊಂದು ಜಾತಿಯು ತನ್ನದೇ ಜಾತಿಯ ಐವರು ಹಿರಿಯ ಸದಸ್ಯರುಗಳನ್ನೊಳಗೊಂಡ ಜಾತಿ ಪಂಚಾಯತಿಯನ್ನು ಹೊಂದಿದ್ದು, ನ್ಯಾಯ ಪರಿಹಾರ ಹಬ್ಬ ಹರಿದಿನ, ಜಾತ್ರೆ ಹಾಗೂ ವಿವಾಹವನ್ನೊಳಗೊಂಡ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. **4) ಏಣಿ-ಶ್ರೇಣಿಯಿಂದ ಕೂಡಿದೆ:** ಸಮಾಜವು ಮೇಲು-ಕೀಳು ಎಂಬ ಆಧಾರದ ಮೇಲೆ ವಿವಿಧ ಜಾತಿಗಳನ್ನು ಶ್ರೇಣಿಕರಿಸಿದ ವ್ಯವಸ್ಥೆಯಾಗಿ ವಿಭಜನೆಗೊಂಡಿತ್ತು. **5) ಆಹಾರ ಮತ್ತು ಸಾಮಾಜಿಕ ಸಂಸರ್ಗಗಳ ಸಂಬಂಧಿಸಿದ ನಿರ್ಬಂಧಗಳು:** ಸಹಭೋಜನ ಮತ್ತು ಸಾಮಾಜಿಕ ಸಂಸರ್ಗಗಳಿಗೆ ಸಂಬಂಧಿಸಿದ ನಿರ್ಬಂದಗಳು ವಿವಿಧ ಜಾತಿಗಳ ಸದಸ್ಯರುಗಳನ್ನು ಪ್ರತ್ಯೇಕಿಸುತ್ತಿದ್ದವು. **6) ಜಾತಿಯು ಧಾರ್ಮಿಕ ಹಾಗೂ ನಾಗರೀಕ ಅನರ್ಹತೆಗಳನ್ನು ಮತ್ತು ವಿವಿಧ ವರ್ಗದವರಿಗಿದ್ದಿದ್ದ ಸೌಲಭ್ಯಗಳನ್ನು ಹೊಂದಿದೆ. 7) ಜಾತಿಯು ಉದ್ಯೋಗದ ಮೇಲೆ ನಿರ್ಬಂಧ ವಿಧಿಸಿದೆ. 8) ಜಾತಿಯು ವಿವಾಹದ ಮೇಲೆ ನಿರ್ಬಂಧ ವಿಧಿಸಿದೆ ಹಾಗೂ ಒಳ ಬಾಂಧವ್ಯ ವಿವಾಹವನ್ನು ಹೊಂದಿದೆ.**

9. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಯೋಗಗಳ ಬಗ್ಗೆ ವಿವರಣೆ ನೀಡಿ.

ಕರ್ನಾಟಕವು ಹಿಂದುಳಿದ ಹಾಗೂ ಸಾಮಾಜಿಕವಗಿ ಅವಕಾಶವಂಚಿತ ವರ್ಗಗಳ ಕಲ್ಯಾಣಕ್ಕಾಗಿ ರಾಜ ಮಹರಾಜರ ಆಳ್ವಿಕೆಯ ಕಾಲದಿಂದಲೂ ಕೆಲವು ಗೌಲಭ್ಯಗಳನ್ನು ನೀಡುತಿದ್ದದನ್ನು ನಾವು ಇತಿಹಾಸಗಳಿಂದ ತಿಳಿಯಬಹುದು. 1918 ರಲ್ಲಿ ಮೈಸೂರು ಸಂಸ್ಥಾನದ ರಾಜರ ಆಡಳಿತವು ಸರ್ ಲೆಸ್ಲಿ ಮಿಲ್ಲರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು, ಅಲ್ಲದೇ ಸ್ವಾತಂತ್ರ್ಯ ನಂತರದಲ್ಲಿ ಕೆಲವು ಆಯೋಗಗಳನ್ನು ರಚಿಸಿದೆ. ಅವು ಈ ಕೆಳಗಿನಂತಿವೆ.

ನಾಗನಗೌಡ ಆಯೋಗ, ಎಲ್.ಜಿ.ಹಾವನೂರು ಆಯೋಗ, ವೆಂಕಟಸ್ವಾಮಿ ಆಯೋಗ, ಹಾಗೂ ಚಿನ್ನಪ್ಪ ರೆಡ್ಡಿ ಆಯೋಗ.

1) **ನಾಗನ ಗೌಡ ಆಯೋಗ:** ಕರ್ನಾಟಕ ಸರ್ಕಾರವು 1960 ರಲ್ಲಿ ಡಾ. ನಾಗನಗೌಡರವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗವೊಂದನ್ನು ರಚಿಸಿತು. ಈ ಆಯೋಗವನ್ನು ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಆಯೋಗ ಎಂದು ಕರೆಯುತ್ತಾರೆ. ಈ ಆಯೋಗವು ತನ್ನ ವರದಿಯನ್ನು 1961ರಲ್ಲಿ ಸಲ್ಲಿಸಿತು. ವರದಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ 15% ಪರಿಶಿಷ್ಟ ಪಂಗಡಗಳಿಗೆ ಶೇ3% ಹಾಗೂ ಹಿಂದುಳಿದ ವರ್ಗಗಳಿಗೆ ಶೇ50% ಮೀಸಲಾತಿಗೆ ಶಿಫಾರಸ್ಸು ಮಾಡಿತು.

2) **ಎಲ್.ಜಿ.ಹಾವನೂರ್ ಆಯೋಗ:** 1972ರಲ್ಲಿ ಎಲ್.ಜಿ.ಹಾವನೂರ್‌ರವರ ನೇತೃತ್ವದಲ್ಲಿ ಎರಡನೆ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು. ಈ ಆಯೋಗವು ತನ್ನ ವರದಿಯನ್ನು 1975ರಲ್ಲಿ ಸಲ್ಲಿಸಿತು. ಈ ವರದಿಯಲ್ಲಿ ರಾಜ್ಯದ ಶೇ 75%ರಷ್ಟು ಜನ ಹಿಂದುಳಿದವರಿದ್ದು ಅವರಿಗೆ ಮೀಸಲಾತಿಯ ಅಗತ್ಯವಿದೆ ಎಂದು ಹೇಳಲಾಗಿತ್ತು. ಸಂವಿಧಾನದಲ್ಲಿ ಇಷ್ಟು ಪ್ರಮಾಣಕ್ಕೆ ಅವಕಾಶವಿಲ್ಲದಿದ್ದರಿಂದ ಶೇ 50% ರಷ್ಟು ಮೀಸಲಾತಿಯನ್ನು ನಿಗದಿಪಡಿಸಲಾಯಿತು.

3) **ವೆಂಕಟಸ್ವಾಮಿ ಆಯೋಗ:** 1983ರಲ್ಲಿ ಇವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತು. ಈ ಆಯೋಗವು ತನ್ನ ವರದಿಯನ್ನು 1986ರಲ್ಲಿ ಸಲ್ಲಿಸಿತು. ಈ ಆಯೋಗದ ಮೇಲೆ ವ್ಯಾಪಕ ಅಸಮಾಧಾನ ವ್ಯಕ್ತವಾಯಿತು. ಆದ್ದರಿಂದ ಈ ಆಯೋಗದ ವರದಿಯನ್ನು ಅನುಷ್ಠಾನಗೊಳಿಸದೇ ಬೇರೋಂದು ಆಯೋಗವನ್ನು ರಚಿಸಿತು.

4) **ಚಿನ್ನಪ್ಪರೆಡ್ಡಿ ಆಯೋಗ:** 1990ರಲ್ಲಿ ಈ ಆಯೋಗವನ್ನು ರಚಿಸಿತು. ಈ ಆಯೋಗವು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಲು ಯತ್ನಿಸಿದ್ದರಿಂದ ತಕ್ಕಮಟ್ಟಿಗೆ ಮೆಚ್ಚುಗೆಗೆ ಪಾತ್ರವಾಯಿತು.

## ಅಧ್ಯಾಯ : 3 ಒಳಗೊಳ್ಳುವಿಕೆಯ ತಂತ್ರಗಳು

### ಒಂದು ಅಂಕದ ಪ್ರಶ್ನೆಗಳು

1. ಸಂವಿಧಾನದ ಯಾವ ಕಲಮು ಅಸ್ಪೃಶ್ಯತೆಯನ್ನು ನಿಷೇದಿಸುತ್ತದೆ?
**17ನೇ ವಿಧಿಯು ಅಸ್ಪೃಶ್ಯತೆಯನ್ನು ನಿಷೇದಿಸುತ್ತದೆ.**

Sreenivasa U K

2. ಕರ್ನಾಟಕದ ಸೋಲಿಗರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘಟನೆ ಯಾವುದು?
**ಡಾ. ಸುದರ್ಶನ ಅವರ ನೇತೃತ್ವದ ವಿವೇಕಾನಂದ ಗಿರಿಜನ ಕೇಂದ್ರವು ಚಾಮರಾಜ ನಗರ ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘಟನೆಯಾಗಿದೆ.**

3. ಯಾವ ವರ್ಷದಲ್ಲಿ ಸುಲಭ ಶೌಚಲಯ ಸಂಘಟನೆ ಸ್ಥಾಪನೆಯಾಯಿತ?
**ಡಾ.ಬಿಂದೇಶ್ವರಪಾಠಕ್ ರವರು 1970ರಲ್ಲಿ ಸ್ಥಾಪಿಸಿದರು.**

4. S.K.D.R.D.P ಅನ್ನು ವಿಸ್ತರಿಸಿ.
**ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ.**

5. ಬಾಂಗ್ಲದೇಶದಲ್ಲಿ ಸೂಕ್ಷ್ಮ ಹಣಕಾಸಿನ ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು?
**ನೋಬೆಲ್ ಪ್ರಶಸ್ತಿ ಪುರಸ್ಕೃತ ಮೊಹ್ಮದ್‌ಯೂನಸ್**

6. ಲಿಂಗ ತಾರತಮ್ಯ ಎಂದರೇನು?
**ಲಿಂಗವನ್ನಾಧರಿಸಿದ ತಾರತಮ್ಯವೇ ಲಿಂಗ ತಾರತಮ್ಯ. ಇದು ಮೂರು ನಂಬಿಕೆಗಳನ್ನೊಳಗೊಂಡಿದೆ. ಒಂದು ಲಿಂಗವು ಇನ್ನೊಂದಕ್ಕಿಂತ ಹೆಚ್ಚೆಂಬ ನಂಬಿಕೆ**

7. ಲಿಜ್ಜತ್‌ನ ಕೇಂದ್ರ ಕಛೇರಿ ಎಲ್ಲಿದೆ?
**ಲಿಜ್ಜತ್‌ನ ಕೇಂದ್ರ ಕಛೇರಿಯು ಮುಂಬೈನಲ್ಲಿದೆ(1959).**

8. ಸ್ತ್ರೀಶಕ್ತಿ ಯೋಜನೆಯನ್ನು ಯಾವ ವರ್ಷ ಜಾರಿಗೊಳಿಸಲಾಯಿತು?
**2000–2001ರಲ್ಲಿ ಜಾರಿಗೊಳಿಸಲಾಯಿತು.**

9. ಯಾವ ವರ್ಷವನ್ನು ಮಹಿಳಾ ಸಬಲೀಕರಣ ವರ್ಷವೆಂದು ಆಚರಿಸಲಾಯಿತು?
**2001**

10. ಬಹಿಷ್ಕೃತಹಿತಕಾರಿಣಿ ಸಭಾವನ್ನು ಆರಂಬಿಸಿದವರು ಯಾರು?
**ಡಾ.ಬಿ.ಆರ್.ಅಂಬೇಡಕ್ಕರ್.**

11. ಹರಿಜನ ಮತ್ತು ಯಂಗ್ ಇಂಡಿಯಾ ಪತ್ರಿಕೆಯನ್ನು ಆರಂಭಿಸಿದವರು ಯಾರು?
ಮಹಾತ್ಮ ಗಾಂಧಿಜಿ

## ಎರಡು ಅಂಕದ ಪ್ರಶ್ನೆಗಳು

1. ಸೂಕ್ಷ್ಮ ಹಣಕಾಸಿನ ಎರಡು ಲಕ್ಷಣಗಳನ್ನು ತಿಳಿಸಿ.
**1. ಭದ್ರತೆಯಿಲ್ಲದ ಸಾಲ. 2. ಬಡತನ ರೇಖೆ ಕೆಳಗಿರುವವರಿಗೆ ಸಾಲ. 3. ಸ್ವಸಹಾಯ ಸಂಘಗಳ ಸದಸ್ಯರೂ ಕೂಡ ಸೂಕ್ಷ್ಮ ಹಣಕಾಸು ಲಾಭ ಪಡೆಯಬಹುದು. 4. ಸೂಕ್ಷ್ಮ ಹಣಕಾಸಿನಲ್ಲಿ ನೀಡುವ ಸಾಲವನ್ನು ಸ್ವಸಹಾಯ ಸಂಘಗಳು ನಿರ್ಧರಿಸುತ್ತವೆ.**

2. ಸ್ತ್ರೀಶಕ್ತಿಯ ಎರಡು ಗುರಿಗಳನ್ನು ಬರೆಯಿರಿ.
**1. ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿಯನ್ನು ಬಲಪಡಿಸುವುದು ಮತ್ತು ಸಾಮಾಜಿಕ ಬದಲಾವಣೆಗೆ ಅಗತ್ಯ ವಾತಾವರಣ ನಿರ್ಮಿಸುವುದು.**
**2. ಸಾಲ ನೀಡುವ ತತ್ವಗಳಾಧಾರಿತ ಸ್ವಸಹಾಯ ಸಂಘಗಳನ್ನು ರಚಿಸುವುದು.**

3. ಸೂಕ್ಷ್ಮ ಹಣಕಾಸು ಎಂದರೇನು?
**ಬಡವರು ಮತ್ತು ಅಲ್ಪ ಆದಾಯ ಹೊಂದಿದವರಿಗೆ ಉಳಿತಾಯ ಖಾತೆ, ವಿಮೆ ಮತ್ತು ಸಾಲ ಮುಂತಾದ ಆರ್ಥಿಕ ಸೇವೆಗಳನ್ನು ಒದಗಿಸಿ ಅವರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಮತ್ತು ತಮ್ಮ ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ನೆರವಾಗುವುದೇ ಸೂಕ್ಷ್ಮ ಹಣಕಾಸು.**

4. ಮಹಿಳಾ ಸಬಲೀಕರಣ ಎಂದರೇನು?
**ಮಹಿಳೆಯರಿಗೆ ಅಧಿಕಾರ ನೀಡಿ ಅವರು ತಮ್ಮ ಹಕ್ಕುಗಳನ್ನು ಚಲಾಯಿಸಲು ಮತ್ತು ಆರ್ಥಿಕ ಸ್ವಾವಲಂಬಿಗಳಾಗಲು ಪ್ರೇರೇಪಿಸುವುದಾಗಿದೆ.**

5. ನಿಶ್ಚಯಾತ್ಮಕ ಕ್ರಿಯೆಯ ಅರ್ಥವನ್ನು ತಿಳಿಸಿ.
**ಜಾತಿ, ಧರ್ಮ ಲಿಂಗಗಳನ್ನು ಆಧರಿಸಿ ಉದ್ಯೋಗ, ಶಿಕ್ಷಣ ಮತ್ತು ವ್ಯವಹಾರಿಕ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಹೊಂದಿರದ ಸಮೂಹಗಳಿಗೆ ಲಾಭದಾಯಕವಾಗುವ ನೀತಿಯನ್ನು ರೂಪಿಸುವುದು ಆಗಿದೆ.**

6. ಸೂಕ್ಷ್ಮ ಹಣಕಾಸಿನ ಯಾವುದಾದರೂ ಎರಡು ಪ್ರಕಾರಗಳನ್ನು ತಿಳಿಸಿ.
**1. ಅನೌಪಚಾರಿಕ ಹಣಕಾಸು ಸೇವೆ ನೀಡುವವರು. 2) ಸದಸ್ಯರ ಮಾಲಿಕತ್ವದ ಸಂಘಟನೆಗಳು.**

7. NABARD ಅನ್ನು ವಿಸ್ತರಿಸಿ.
**National Bank for Agriculture and Rural Development**. (ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್)

8. LAMPS ಅನ್ನು ವಿಸ್ತರಿಸಿ.
**Large Area Multipurpose Societies.** (**ವಿಶಾಲ ಪ್ರದೇಶ ವಿವಿದೋದ್ದೇಶ ಸಂಘಗಳು**)

9. ಸ್ವಸಹಾಯ ಸಂಘಗಳು ಎಂದರೇನು?
**ಸಮಾನ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ಹೊಂದಿದ, ನಿಯಮಿತವಾಗಿ, ತುರ್ತು ಸ್ಥಿತಿಗಳಿಗಾಗಿ ನಿಗದಿತ ಮೊತ್ತವನ್ನು ಉಳಿಸಲು ಸಹಮತ ಹೊಂದಿದ ಮತ್ತು ಪರಸ್ಪರ ನೆರವಿನಿಂದ ತಮ್ಮ ತುರ್ತು ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಸಣ್ಣ ಉದ್ದಿಮೆದಾರರ ಸಮೂಹವೇ ಸ್ವಸಹಾಯ ಸಂಘಗಳು.**

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಸೂಕ್ಷ್ಮ ಹಣಕಾಸಿನ ಪ್ರಮುಖ ಲಕ್ಷಣಗಳನ್ನು ವಿವರಿಸಿ.
1. ಭದ್ರತೆಯಿಲ್ಲದ ಸಾಲ 2. ಬಡತನ ರೇಖೆ ಕೆಳಗಿರುವವರಿಗೆ ಸಾಲ.
3. ಸ್ವಸಹಾಯ ಸಂಘಗಳ ಸದಸ್ಯರೂ ಕೂಡ ಸೂಕ್ಷ್ಮ ಹಣಕಾಸು ಲಾಭ ಪಡೆಯಬಹುದು.
4. ಸೂಕ್ಷ್ಮ ಹಣಕಾಸಿನಲ್ಲಿ ಪಡೆಯುವ ಗರಿಷ್ಠ ಸಾಲದ ಮೊತ್ತವು ಕಡಿಮೆ ಪ್ರಮಾಣದ್ದಾಗಿರುತ್ತದೆ.
5. ಬಡವರಿಗೆ ಸೂಕ್ಷ್ಮ ಹಣಕಾಸಿನಲ್ಲಿ ನೀಡುವ ಸಾಲವನ್ನು ಸ್ವಸಹಾಯ ಸಂಘಗಳು ನಿರ್ಧರಿಸುತ್ತವೆ.

2. ಸಮಾನತೆಯತ್ತ ವರದಿಯ ಉದ್ದೇಶಗಳನ್ನು ವಿವರಿಸಿ.
ಭಾರತೀಯ ಮಹಿಳೆಯರ ಅಂತಸ್ತು ಮತ್ತು ಸಮಸ್ಯೆಗಳನ್ನು ಪರಿಶೀಲಿಸಲು ರಾಷ್ಟ್ರೀಯ ಆಯೋಗವೊಂದನ್ನು ರಚಿಸಲಾಯಿತು. ಇದನ್ನೇ ಸಮಾನತೆಯತ್ತ ವರದಿ ಎನ್ನಲಾಯಿತು. ಇದು ಮಹಿಳೆಯರ ಸಾಮಾಜಿಕ ದುಃಸ್ಥಿತಿಯ ಚಿತ್ರಣ ನೀಡಿದೆ.
**ಉದ್ದೇಶಗಳು:–**
1. ಮಹಿಳೆಯರ ಸಾಮಾಜಿಕ ಅಂತಸ್ತು, ಶಿಕ್ಷಣ ಮತ್ತು ಉದ್ಯೋಗಗಳ ಮೇಲೆ ಪ್ರಭಾವ ಬೀರುವ ಸಂವಿಧಾನಾತ್ಮಕ, ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಅವಕಾಶಗಳ ಪರಿಶೀಲನೆ.
2. ಕಳೆದೆರಡು ದಶಕಗಳಲ್ಲಿ ಈ ಸೌಲಭ್ಯಗಳು ಗ್ರಾಮೀಣ ಮಹಿಳೆಯರ ಅಂತಸ್ತಿನ ಮೇಲೆ ಬೀರಿದ ಪ್ರಭಾವದ ಮೌಲ್ಯಮಾಪನ ಮಾಡುವುದು ಮತ್ತು ಇನ್ನೂ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಕುರಿತು ಸಲಹೆ ನೀಡುವುದು.
3. ಮಹಿಳೆಯರ ಶಿಕ್ಷಣದ ಅಭಿವೃದ್ಧಿ ಕುರಿತು ಅಭ್ಯಸಿಸುವುದು ಮತ್ತು ಕೆಲಕ್ಷೇತ್ರಗಳಲ್ಲಿ ನಿಧಾನ ಪ್ರಗತಿಗೆ ಕಾರಣಗಳನ್ನು ಗುರುತಿಸಿ ಸೂಕ್ತ ಪರಿಹಾರಾತ್ಮಕ ಸಲಹೆಗಳನ್ನು ನೀಡುವುದು.
4. ಉದ್ಯೋಗ ಮತ್ತು ವೇತನದಲ್ಲಿ ತಾರತಮ್ಯವೂ ಸೇರಿದಂತೆ ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಸಮೀಕ್ಷೆ ಮಾಡುವುದು.

Sreenivasa UK

5. ಬದಲಾದ ಸಾಮಾಜಿಕ ಮಾದರಿಗಳಲ್ಲಿ ಪತ್ನಿಯರಾಗಿ ಹಾಗೂ ತಾಯಿಯರಾಗಿ ಮಹಿಳೆಯರ ಅಂತಸ್ತನ್ನು ಪರಿಶೀಲಿಸುವುದು ಮತ್ತು ಉನ್ನತ ಶಿಕ್ಷಣ ಹಾಗೂ ಉದ್ಯೋಗಗಳ ಕ್ಷೇತ್ರಗಳಲ್ಲಿ ಅವರ ಸಮಸ್ಯೆಗಳನ್ನು ಗುರುತಿಸುವುದು.
6. ಜನಸಂಖ್ಯಾ ನೀತಿಗಳು ಮತ್ತು ಕುಟುಂಬ ಯೋಜನಾ ಕಾರ್ಯಕ್ರಮಗಳು ಮಹಿಳೆಯರ ಅಂತಸ್ತಿನ ಮೇಲೆ ಬೀರಿದ ಪ್ರಭಾವ ಕುರಿತಂತೆ ಪ್ರಕರಣಗಳ ಸಮೀಕ್ಷೆ ಮಾಡುವುದು.
7. ದೇಶ ನಿರ್ಮಾಣ ಕಾರ್ಯದಲ್ಲಿ ಮಹಿಳೆಯರು ಪೂರ್ಣ ಪ್ರಮಾಣದ ಪಾತ್ರ ನಿರ್ವಹಿಸಲು ಸಾಧ್ಯವಾಗುವಂತೆ ಮಾಡುವ ಇತರೆ ಯಾವುದೇ ಕ್ರಮಗಳನ್ನು ಸೂಚಿಸುವುದು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಕೈಗೊಳ್ಳಲಾದ ಯಾವುದಾದರೂ ಹತ್ತು ಸಾಂವಿಧಾನಿಕ ಕ್ರಮಗಳನ್ನು ವಿವರಿಸಿ.

1) 15ನೇ ವಿಧಿಯನ್ವಯ – ಭಾರತದ ಯಾವುದೇ ನಾಗರಿಕರನ್ನು ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮ ಸ್ಥಳಾಧಾರಿತ ತಾರತಮ್ಯ ಮಾಡುವಂತಿಲ್ಲ. 2) 16ನೇ ವಿಧಿಯನ್ವಯ – ಸರಕಾರಿ ಉದ್ಯೋಗ ನೇಮಕಾತಿಯಲ್ಲಿ ಎಲ್ಲರಿಗೂ ಸಮಾನ ಅವಕಾಶ. 3) 17ನೇ ವಿಧಿಯನ್ವಯ – ಅಸ್ಪೃಶ್ಯತೆಯ ಆಚರಣೆಯ ನಿಷೇಧ. 4) 23ನೇ ವಿಧಿಯನ್ವಯ – ಮಾನವ ಸಾಗಾಣಿಕೆ, ಬಲವಂತದ ದುಡಿಮೆ ಕಾನೂನು ಬಾಹಿರ 5) 25 ಬಿ ವಿಧಿಯನ್ವಯ –ಸಾರ್ವಜನಿಕವಾದ ಯಾವುದೇ ಹಿಂದೂ ಧಾರ್ಮಿಕ ಸಂಘಟನೆಗಳು ಎಲ್ಲ ಹಿಂದೂಗಳಿಗೆ ಮುಕ್ತ. 6) 29ನೇ ವಿಧಿಯನ್ವಯ – ಭಾಷಾ, ಸಂಸ್ಕೃತಿ ಕಾಪಾಡಿಕೊಳ್ಳುವುದು. ಅನ್ಯ ಸಂಸ್ಕೃತಿ, ಭಾಷೆ ಹೇರುವಂತಿಲ್ಲ. 7) 46ನೇ ವಿಧಿಯನ್ವಯ – ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಪ್ರವರ್ತಿಸಲು ಸರಕಾರ ಕಾಳಜಿವಹಿಸುವುದು. ಸಾಮಾಜಿಕ ಅನ್ಯಾಯ ಶೋಷಣೆಯಿಂದ ರಕ್ಷಣೆ. 8) 325ನೇ ವಿಧಿಯನ್ವಯ – ಎಲ್ಲ ಭಾರತೀಯರಿಗೆ ಮತದಾನದ ಹಕ್ಕು. 9) 330, 332 ಮತ್ತು 334ನೇ ವಿಧಿಯನ್ವಯ – ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳ ಮೀಸಲಾತಿ. 10) 164ನೇ ವಿಧಿಯನ್ವಯ – ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ.

4. ಮಹಿಳಾ ಸಬಲೀಕರಣದ ಕಾರ್ಯತಂತ್ರಗಳನ್ನು ವಿವರಿಸಿ.

**1. ಕಾನೂನಾತ್ಮಕ ತಂತ್ರಗಳು:** ಮಹಿಳೆಯರಿಗೆ ಪುರುಷರಷ್ಟೆ ಸಮಾನವಾದ ಸ್ಥಾನಮಾನ ನೀಡುವ ಸಲುವಾಗಿ ಹಲವು ಶಾಸನಗಳನ್ನು ರಚಿಸಿದೆ. ಎ)1955ರ ಹಿಂದೂ ವಿವಾಹ ಕಾಯ್ದೆ. ಬಿ)1956ರ ಹಿಂದೂ ಉತ್ತರಾಧಿಕಾರಿ ಕಾಯ್ದೆ. ಸಿ)1956ರ ಹಿಂದೂ ದತ್ತು ಮತ್ತು ಜೀವನಾಂಶ ಕಾಯ್ದೆ ಹಾಗೂ ಡಿ)1984ರ ವರದಕ್ಷಿಣೆ ನಿಷೇದ ಕಾಯ್ದೆಗಳು ಪ್ರಮುಖವಾದವುಗಳು. **2) ಸಾಮಾಜಿಕ ತಂತ್ರಗಳು:** ಎ)ಮಹಿಳಾ ಕಲ್ಯಾಣ ಕಾರ್ಯಕ್ರಮಗಳ ಜಾರಿ. ಬಿ)ಮಹಿಳೆಯರಲ್ಲಿ ಕಾನೂನು ಅರಿವು. ಸಿ)ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನೆರೆಹೊರೆಯವರ ನೆರವು ಪಡೆಯುವುದು. ಡಿ)ಅನ್ಯಾಯದ ವಿರುದ್ಧ ಹೋರಾಡುವ ಬಲ ಸೃಷ್ಟಿಸುವುದರ ಜೊತೆಗೆ ಇನ್ನೂ ಮುಂತಾದ ಸಾಮಾಜಿಕ ತಂತ್ರಗಳನ್ನು ಅನುಷ್ಠಾನಗೊಳಿಸುವುದು. **3) ಆರ್ಥಿಕ ತಂತ್ರಗಳು:** ಎ)ಶೈಕ್ಷಣಿಕ ಮತ್ತು ವೃತ್ತಿ ತರಬೇತಿ ನೀಡುವುದು. ಬಿ)ತಂತ್ರಜ್ಞಾನದ ತರಬೇತಿಯನ್ನ ನೀಡಿ ದೈಹಿಕ ಶ್ರಮ ಕಡಿಮೆಯಾಗುವಂತೆ ಮಾಡುವುದು. ಸಿ)ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ನೀಡುವುದು. ಡಿ)ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ನೀಡುವುದು. **4) ರಾಷ್ಟ್ರೀಯ ಮಹಿಳಾ ಆಯೋಗ**

5. ಲಿಂಗತಾರತಮ್ಯದ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

ಲಿಂಗವನ್ನಾಧರಿಸಿದ ತಾರತಮ್ಯವೇ ಲಿಂಗ ತಾರತಮ್ಯ. ಇದು ಮೂರು ನಂಬಿಕೆಗಳನ್ನೊಳಗೊಂಡಿದೆ. ಒಂದು ಲಿಂಗವು ಇನ್ನೊಂದಕ್ಕಿಂತ ಹೆಚ್ಚೆಂಬ ನಂಬಿಕೆ. ಸ್ತ್ರೀ ಪುರುಷರು ಬಹಳ ಭಿನ್ನರಾಗಿದ್ದು, ಇದು ಸಮಾಜ, ಭಾಷೆ, ದೈಹಿಕ ಸಂಪರ್ಕದ ಹಕ್ಕು ಮತ್ತು ಕಾನೂನಿಗೆ ಸಂಬಂಧಿಸಿದ ಅಂಶಗಳಲ್ಲಿ ಬಲವಾಗಿ ಬಿಂಬಿತವಾಗಿರಬೇಕೆಂಬ ನಂಬಿಕೆ. ಇದು ಪುರುಷರು ಅಥವಾ ಸ್ತ್ರೀಯರ ಮೇಲಿನ ದ್ವೇಷದ ಭಾವನೆಯನ್ನು ಸೂಚಿಸುತ್ತದೆ.

6. ಭಾರತದಲ್ಲಿ ಕೈಗೊಳ್ಳಲಾದ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳನ್ನು ವಿವರಿಸಿ.

**1. ಆರ್ಥಿಕ ಕಾರ್ಯಕ್ರಮಗಳು:** ಎ)20 ಅಂಶಗಳ ಕಾರ್ಯಕ್ರಮ. ಬಿ)ಲ್ಯಾಂಪ್ಸ್ ಮತ್ತು ಟ್ರೈಫೆಡ್‌ಗಳ ಸ್ಥಾಪನೆ. ಸಿ) ಕೃಷಿ ಕಾರ್ಯಕ್ಕೆ ನೆರವು. **2)ಶೈಕ್ಷಣಿಕ ಕಾರ್ಯಕ್ರಮಗಳು:** ಆಶ್ರಮ ಶಾಲೆ, ತಾಂತ್ರಿಕ ತರಬೇತಿ, ಉಚಿತ ಶಿಕ್ಷಣ ಸೌಲಭ್ಯ, ಪರೀಕ್ಷಾ ಪೂರ್ವ ತರಬೇತಿ, ಭಾರತೀಯ ಕೇಂದ್ರಿಯ ಭಾಷಾ ಕೇಂದ್ರ ಮೈಸೂರಿನಲ್ಲಿ, ಬುಡಕಟ್ಟು ಪುಸ್ತಕ ಪ್ರಕಟ. ಸಂಶೋಧನಾ ಕಾರ್ಯಕ್ರಮಗಳು. **3) ಆರೋಗ್ಯ, ವಸತಿ, ಮತ್ತಿತರ ಯೋಜನೆಗಳು.**

7. ಅಸ್ಪೃಶ್ಯರ ಏಳಿಗೆಯಲ್ಲಿ ಗಾಂಧೀಜಿ ಮತ್ತು ಡಾ. ಅಂಬೇಡ್ಕರರವರ ಪಾತ್ರ ವಿವರಿಸಿ.

**ಗಾಂಧೀಜಿ ಪಾತ್ರ:–**

1. ಅಸ್ಪೃಶ್ಯತೆಯ ವಿರೋಧ 2)ಧಾರ್ಮಿಕ ಆಚರಣೆಗಳಲ್ಲಿ ಅವಕಾಶ. 3) ಹರಿಜನ ಮತ್ತು ಯಂಗ್ ಇಂಡಿಯಾ ಪತ್ರಿಕೆ. 4) ಶೌಚಾಲಯ ಸ್ವಚ್ಛತಾ ಕಾರ್ಯಕ್ರಮ. 5) ಹರಿಜನ ಸೇವಕ ಸಂಘದ ಸ್ಥಾಪನೆ. 6) ಕಸ್ತೂರಬಾ ಬಾಲಿಕಾ ಆಶ್ರಮ, ಹರಿಜನ ಬಾಲಿಕಾ ವಿದ್ಯಾಲಯ. 7) ಹರಿಜನ (ದೇವರ ಮಕ್ಕಳು) ಪದದ ಜನಪ್ರಿಯತೆ.

**ಡಾ. ಅಂಬೇಡ್ಕರರವರ ಪಾತ್ರ:–**

1. ಸಂವಿಧಾನದಲ್ಲಿ ಅಧಿಕೃತ ಅವಕಾಶ ಕಲ್ಪನೆ. 2) ಬಹಿಷ್ಕೃತ ಹಿತಕಾರಿಣಿ ಸಭಾ ರಚನೆ. ಸ್ವಸುಧಾರಣೆ, 3) ಸ್ವಾವಲಂಬನೆ, ಸ್ವಗೌರವ, ಆತ್ಮವಿಶ್ವಾಸ, ಸ್ವಪ್ರಗತಿ ಸೂತ್ರ. 4) ಮೂಕನಾಯಕ ಪತ್ರಿಕೆ ಪ್ರಾರಂಭ. 5) ಅಖಿಲಭಾರತ ಶೋಷಿತ ವರ್ಗಗಳ ಸಮ್ಮೇಳನ ತ್ರಿವಳಿ ಸೂತ್ರ, ಶಿಕ್ಷಣ, ಹೋರಾಟ, ಸಂಘಟನೆ ತತ್ವ ಪ್ರಚಾರ

## ಅಧ್ಯಾಯ : 4 ಭಾರತದಲ್ಲಿ ಕುಟುಂಬ

### ಒಂದು ಅಂಕದ ಪ್ರಶ್ನೆಗಳು

1. ಇಲ್ಲಂ ಎಂದರೇನು?
**ಕೇರಳದ ನಂಬೂದರಿ ಪಿತೃಪ್ರಧಾನ ಅವಿಭಕ್ತ ಕುಟುಂಬವನ್ನು ಇಲ್ಲಂ ಎಂದು ಕರೆಯುತ್ತಾರೆ.**
2. ಕರ್ತ ಎಂದರೆ ಯಾರು?
**ಅವಿಭಕ್ತ ಕುಟುಂಬದ ಯಜಮಾನ.**
3. ತರವಾಡು ಎಂದರೇನು?
**ಕೇರಳದ ನಾಯರ್ ಸಮೂದಾಯದ ಮಾತೃಪ್ರಧಾನ ಅವಿಭಕ್ತ ಕುಟುಂಬವನ್ನು ತರವಾಡು ಎನ್ನುವರು.**
4. "ಕಿನ್‌ಶಿಫ್ ಆರ್ಗನೈಜೇಶನ್ ಇನ್ ಇಂಡಿಯಾ" ಗ್ರಂಥವನ್ನು ಬರೆದವರು ಯಾರು?
**ಶ್ರೀಮತಿ ಇರಾವತಿ ಕರ್ವೆ.**
5. ಕರ್ಣವನ್ ಎಂದರೇ ಯಾರು?

Sreenivasa U K

**ಮಾತೃ ಪ್ರಧಾನ ಕುಟುಂಬದ ಹಿರಿಯ ಸಹೋದರ, ಕುಟುಂಬದ ಹೊಣೆಗಾರಿಕೆಯ ಜವಬ್ದಾರಿ ಹೊಂದಿರುವ ವ್ಯಕ್ತಿಯನ್ನು ಕರ್ಣವನ್ ಎಂದು ಕರೆಯಲಾಗಿದೆ.**

6. "ಮ್ಯಾರೇಜ್ ಆಂಡ್ ಫ್ಯಾಮಿಲಿ ಇನ್ ಇಂಡಿಯಾ" ಎಂಬ ಗ್ರಂಥದ ಲೇಖಕರು ಯಾರು?
   **ಕೆ.ಎಂ.ಕಪಾಡಿಯ**
7. ಅವಿಭಕ್ತ ಕುಟುಂಬವನ್ನು "ಮಹಾಮನೆ ಎಂದು ಕರೆದವರು ಯಾರು?
   **ಹೆನ್ರಿಮೆನ್**
8. ಅವಿಭಕ್ತ ಕುಟುಂಬವನು ಕೂಡುಬಂಡವಾಳ ಮತ್ತು ಸಹಕಾರಿ ಸಂಘ ಎಂದು ಕರೆದವರು ಯಾರು?
   **ಓ ಮಾಲೆ.**
9. ನರಸಿಂಗನವರ ಅವಿಭಕ್ತ ಕುಟುಂಬದ ಪ್ರಮುಖ ಉದ್ಯೋಗ ಯಾವುದು?
   **ಕೃಷಿ**
10. "ಸಮ್ ಆಸ್ಪೆಕ್ಟ್ಸ್ ಆಫ್ ಫ್ಯಾಮಿಲಿ ಇನ್ ಮಹೂವ" ಗ್ರಂಥದ ಲೇಖಕರು ಯಾರು?
    **ಐ.ಪಿ.ದೇಸಾಯಿ.**

## ಎರಡು ಅಂಕದ ಪ್ರಶ್ನೆಗಳು

1. ಅವಿಭಕ್ತ ಕುಟುಂಬದ ಮೇಲೆ ಪ್ರಭಾವ ಬೀರಿದ ಎರಡು ಸಾಮಾಜಿಕ ಶಾಸನಗಳನ್ನು ಹೆಸರಿಸಿರಿ.
   **1) 1955ರ ಹಿಂದೂ ವಿವಹ ಕಾಯ್ದೆ. 2) 1956ರ ಹಿಂದೂ ಉತ್ತರಾಧಿಕಾರಿ ಕಾಯ್ದೆ.**
2. ಅವಿಭಕ್ತ ಕುಟುಂಬ ಪರಿವರ್ತನೆಗೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
   **ಕೈಗಾರಿಕರಣ, ನಗರೀಕರಣ, ಅಧುನಿಕ ಶಿಕ್ಷಣ, ಸಂವಿಧಾನ ಹಾಗೂ ಅಧುನಿಕ ಜೀವನ ವಿಧಾನ.**
3. ಅವಿಭಕ್ತ ಕುಟುಂಬದ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿ.
   **ಎ) ಆರ್ಥಿಕ ಅನುಕೂಲತೆ. ಬಿ)ಸದಸ್ಯರ ರಕ್ಷಣೆ. ಸಿ) ಮನೋರಂಜನೆಯನ್ನು ನೀಡುತ್ತದೆ.**
   **ಡಿ) ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿ. ಇ) ಸಂಪತ್ತಿಗೆ ಸಂಬಂದಿಸಿದಂತೆ ಸಮಾಜವಾದದ ಪರಿಕಲ್ಪನೆ.**
4. ಅವಿಭಕ್ತ ಕುಟುಂಬದ ಎರಡು ಪ್ರಕಾರಗಳನ್ನು ತಿಳಿಸಿ.
   **ಪಿತೃ ಪ್ರಧಾನ ಹಾಗೂ ಮಾತೃ ಪ್ರಧಾನ ಅವಿಭಕ್ತ ಕುಟುಂಬ.**
5. ಅವಿಭಕ್ತ ಕುಟುಂಬಕ್ಕೆ ಒಂದು ವ್ಯಾಖ್ಯಾನ ಕೊಡಿ.
   **ಆಸ್ತಿ, ಆದಾಯ ಮತ್ತು ಹಕ್ಕುಬಾದ್ಯತೆಗಳ ಮೂಲಕ ಪರಸ್ಪರ ಸಂಬಂಧಿತವಾದ ಮೂರು-ನಾಲ್ಕು ತಲೆಮಾರುಗಳಿಗೆ ಸೇರಿದ ಜನಸಮುದಾಯವು ಅವಿಭಕ್ತ ಕುಟುಂಬ ಎನಿಸುತ್ತದೆ.**
6. ಅವಿಭಕ್ತ ಕುಟುಂಬದ ಯಾವುದಾದರೂ ಎರಡು ಅನಾನುಕೂಲಗಳನ್ನು ತಿಳಿಸಿ.
   **ಎ) ಸೋಮಾರಿತನವನ್ನು ಪ್ರೋತ್ಸಾಹಿಸುತ್ತದೆ. ಬಿ) ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಅಡಚಣೆ.**
   **ಸಿ) ಸಂಘರ್ಷಗಳಿಗೆ ಎಡೆಮಾಡಿಕೊಡುತ್ತದೆ. ಡಿ) ಅತಿ ಸಂತಾನಕ್ಕೆ ಪ್ರೋತ್ಸಾಹವನ್ನು ನೀಡುತ್ತದೆ.**
7. ಇರಾವತಿ ಕರ್ವೆರವರ ಅವಿಭಕ್ತ ಕುಟಂಬದ ವ್ಯಾಖ್ಯೆಯನ್ನು ಬರೆಯಿರಿ.
   **"ರಕ್ತಸಂಬಂದಿಗಳ ಸಮೂಹವೊಂದು ಒಂದೇ ಮನೆಯಲ್ಲಿ ವಾಸಿಸುತ್ತಾ ಒಂದೇ ಅಡುಗೆಮನೆಯಲ್ಲಿ ತಯಾರಿಸಿದ ಆಹಾರವನ್ನು ಸೇವಿಸುತ್ತಾ ಆಸ್ತಿಯ ಮೇಲೆ ಸಮಾನ ಒಡೆತನವನ್ನು ಹೊಂದುತ್ತಾ ಮತ್ತು ಕುಟುಂಬದ ಪೂಜಾಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುವ ಕುಟುಂಬವನ್ನು ಅವಿಭಕ್ತ ಕುಟುಂಬ" ಎಂದು ಕರೆದಿದ್ದಾರೆ.**
8. ತರವಾಡಿನ ಎರಡು ಪರಿವರ್ತನೆಗಳ ಅಂಶಗಳನ್ನು ಹೆಸರಿಸಿರಿ.
   **ಎ) ತರವಾಡಿನ ಆಸ್ತಿಗಳು ಕುಟುಂಬದ ಸದಸ್ಯರಲ್ಲಿ ವಿಭಜನೆಯಾಗುತ್ತಿದೆ. ಬಿ) ಕರ್ಣವನ್ ಅಧಿಕಾರದ ಮೇಲೆ ನಿಯಂತ್ರಣ ವಿಧಿಸಲಾಗಿದೆ.**
9. ಅವಿಭಕ್ತ ಕುಟುಂಬಗಳ ಮೇಲೆ ಅಧುನಿಕ ಶಿಕ್ಷಣದ ಎರಡು ಪ್ರಭಾವಗಳನ್ನು ತಿಳಿಸಿ.
   **ಎ) ಮೌಲ್ಯಗಳು ಹಾಗೂ ಸಂಪ್ರದಾಯಗಳ ಅವನತಿ. ಬಿ) ವೃತ್ತಿ ಚಲನೆಗೆ ಅವಕಾಶ ಕಲ್ಪಿಸಿದೆ.**
10. ಕರ್ತಾನ ಎರಡು ಅಧಿಕಾರವನ್ನು ಹೆಸರಿಸಿರಿ.
    **ಎ) ಆಸ್ತಿಯ ನಿರ್ವಹಣೆಯನ್ನು ಮಾಡುತ್ತಾನೆ. ಬಿ) ಕುಟುಂಬದ ಸದಸ್ಯರಿಗೆ ವಿವಾಹದ ಕಾರ್ಯವನ್ನು ಮಾಡುತ್ತಾನೆ. ಸಿ) ಆರ್ಥಿಕ ಕಾರ್ಯವನ್ನು ಕೈಗೊಳ್ಳುತ್ತಾನೆ.**

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಅವಿಭಕ್ತ ಕುಟುಂಬ ಪರಿವರ್ತನೆಗೆ ಕಾರಣವಾಗುವ ಅಂಶಗಳನ್ನು ವಿವರಿಸಿ.
   1) ಕೈಗಾರೀಕಾಕರಣ. 2) ನಗರೀಕರಣ. 3) ಅಧುನಿಕ ಶಿಕ್ಷಣ. 4) ಶಾಸನಗಳು. 5) ಪಾಶ್ಚಾತ್ಯರ ಜೀವನ ಮೌಲ್ಯಗಳು. 6) ಮಹಿಳಾ ಜಾಗೃತಿ. 7) ಸಾರಿಗೆ ಸಂಪರ್ಕದ ಬೆಳವಣಿಗೆ. 8) ಗೃಹ ಕೈಗಾರಿಕೆಗಳು ಹಾಗೂ ಕೃಷೀಯ ಅವನತಿ.
2. ಅವಿಭಕ್ತ ಕುಟುಂಬದ ಅನುಕೂಲಗಳನ್ನು ವಿವರಿಸಿ.
   ಅನುಕೂಲಗಳು: 1. ಶಾಶ್ವತವಾದುದು. 2.ಆರ್ಥಿಕ ಪ್ರಗತಿಗೆ ಸಹಾಯಕ. 3.ಖರ್ಚಿನ ಉಳಿತಾಯ. 4.ಶ್ರಮ ವಿಭಜನೆಯ ಲಾಭ. 5. ಸಾಮಾಜಿಕ ವಿಮಾ ಕಂಪನಿಯಂತೆ ಕಾರ್ಯ ನಿರ್ವಹಿಸುವುದು. 6. ಸಾಮಾಜಿಕ ಭದ್ರತೆ. 7. ಮನೋರಂಜನೆಗೆ ಅವಕಾಶ. 8. ವಿರಾಮ ನೀಡಿಕೆ. 9. ಸಾಮಾಜಿಕ ನಿಯಂತ್ರಣದ ಸಾಧನ. 10. ಸಹಕಾರದ ಗುಣ.
3. ಅವಿಭಕ್ತ ಕುಟುಂಬದ ಐದು ಅನಾನುಕೂಲತೆಗಳನ್ನು ವಿವರಿಸಿ.
   **<u>ಅನಾನೂಕೂಲಗಳು:</u>** 1) ಸೋಮಾರಿತನವನ್ನು ಪ್ರೋತ್ಸಾಹಿಸುತ್ತದೆ. 2) ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಅಡಚಣೆ. 3) ಸಂಘರ್ಷಗಳಿಗೆ ಎಡೆಮಾಡಿಕೊಡುತ್ತದೆ. 4) ಗಲಭೆ ಹಾಗೂ ಘರ್ಷಣೆಗಳ ಮೂಲವಾಗಿದೆ. 5) ಅತಿ ಸಂತಾನಕ್ಕೆ ಪ್ರೋತ್ಸಾಹವನ್ನು ನೀಡುತ್ತದೆ.
4. ಪಿತೃ ಪ್ರಧಾನ ಅವಿಭಕ್ತ ಕುಟುಂಬದ ಬಗ್ಗೆ ಟಿಪ್ಪಣಿ ಬರೆಯಿರಿ.
   <u>ಪಿತೃ ಪಧಾನ ಅವಿಭಕ್ತ ಕುಟುಂಬ:-</u> ಕುಟುಂಬದ ಸಮಸ್ತ ಅಧಿಕಾರಗಳೆಲ್ಲವು ಹಿರಿಯ ಪುರಷನ ಕಡೆ ಕೇಂದ್ರಿಕೃತವಾಗಿದ್ದರೆ ಅಂತಹ ಕುಟುಂಬವನ್ನ ಪಿತೃ ಪ್ರಧಾನ ಅವಿಭಕ್ತ ಕುಟುಂಬ ಎಂದು ಕರೆಯುತ್ತೇವೆ.
   ಕೇರಳದ ನಂಬೂದರಿ ಬ್ರಾಹ್ಮಣರ ಪಿತೃ ಪ್ರಧಾನ ಅವಿಭಕ್ತ ಕುಟುಂಬವೇ ಇಲ್ಲಂ ಎಂದು ಕರೆಯುತ್ತೇವೆ. ಇಂತಹ ಕುಟುಂಬವು ಭಾರತದಾದ್ಯಂತ ಕಂಡು ಬರುವ ಸಾರ್ವತ್ರಿಕ ವ್ಯವಸ್ಥೆಯಾಗಿದೆ.
5. ಅವಿಭಕ್ತ ಕುಟುಂಬದ ಐದು ಲಕ್ಷಣಗಳನ್ನು ವಿವರಿಸಿರಿ.
   1) ಸಾಮಾನ್ಯ ನೆಲೆ. 2) ಸಾಮಾನ್ಯ ಅಡುಗೆ ಮನೆ. 3) ಕರ್ತಾನ ಅಧಿಕಾರ. 4) ಸಾಮಾನ್ಯ ಪೂಜಾ ಮಂದಿರ. 5) ವ್ಯವಸ್ಥೆಗೊಳಿಸಿದ ವಿವಾಹಗಳು. 6) ಅವಿಭಕ್ತ ಆಸ್ತಿ.
6. ತರವಾಡ ಬಗ್ಗೆ ಟಿಪ್ಪಣಿ ಬರೆಯಿರಿ.
   <u>ಮಾತೃ ಪ್ರಧಾನ ಕುಟುಂಬ:-</u> ಕುಟುಂಬದ ಸಮಸ್ತ ಅಧಿಕಾರಗಳೆಲ್ಲವು ಮನೆಯ ಹಿರಿಯ ಮಹಿಳೆಯ ಕಡೆ ಕೇಂದ್ರಿಕೃತವಾಗಿದ್ದರೆ ಅಂತಹ ಕುಟುಂಬವನ್ನು ಮಾತೃ ಪ್ರಧಾನ ಅವಿಭಕ್ತ ಕುಟುಂಬ ಎಂದು ಕರೆಯುತ್ತೇವೆ.
   ಕೇರಳದ ನಾಯರ್ ಸಮುದಾಯದ ಮಾತೃ ಪ್ರಧಾನ ಅವಿಭಕ್ತ ಕುಟುಂಬವೇ "ತರವಾಡು" ಎಂದು ಕರೆಯುತ್ತೇವೆ. ಅಸ್ಸಾಂನ ಗಾರೋ ಹಾಗೂ ಖಾಸಿ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುತ್ತದೆ.
   **ಕರ್ಣವರ್:** ತಾಯಿಯ ಸಹೋದರ ಕುಟುಂಬದ ಹೊಣೆಗಾರಿಕೆಯ ಜವಬ್ದಾರಿ ಹೊಂದಿರುವ ವ್ಯಕ್ತಿಯನ್ನು ಕರ್ಣವನ್ ಎಂದು ಕರೆಯಲಾಗಿದೆ.



Sreenivasa U K

ತರವಾಡಿನ ಪರಿವರ್ತನೆಗಳು: ಎ) ತರವಾಡಿನ ಆಸ್ತಿಗಳು ಕುಟುಂಬದ ಸದಸ್ಯರಲ್ಲಿ ವಿಭಜನೆಯಾಗುತ್ತಿದೆ. ಬಿ) ಕರ್ಣವನ್ ಅಧಿಕಾರದ ಮೇಲೆ ನಿಯಂತ್ರಣ ವಿಧಿಸಲಾಗಿದೆ.

## ಅಧ್ಯಾಯ : 5 ಭಾರತೀಯ ಗ್ರಾಮಗಳ ಬದಲಾವಣೆ, ಅಭಿವೃದ್ಧಿ ಮತ್ತು ಭಾರತದ ನಗರೀಕರಣ

### ಒಂದು ಅಂಕದ ಪ್ರಶ್ನೆಗಳು

1. ಗ್ರಾಮೀಣ ಸಮುದಾಯದ ಒಂದು ಲಕ್ಷಣವನ್ನು ತಿಳಿಸಿ.
   **ಎ) ಗಾತ್ರ–ಚಿಕ್ಕದು. ಬಿ) ಸಾಮಾಜಿಕ ಸಂಬಂಧಗಳ ಸ್ವರೂಪ–ಪ್ರಾಥಮಿಕ**
2. "ಭಾರತೀಯ ಗ್ರಾಮಗಳನ್ನು ಪುಟ್ಟ ಗಣರಾಜ್ಯಗಳು ಎಂದು ಕರೆದವರು ಯಾರು?
   **ಚಾರ್ಲ್ಸ್‌ಮೆಟ್‌ಕಾಫ್.**
3. "ರೂರಲ್ ಸೋಷಿಯಾಲಾಜಿ ಇನ್ ಇಂಡಿಯಾ" ಎಂಬ ಗ್ರಂಥದ ಕರ್ತೃ ಯಾರು?
   **ಎ.ಆರ್.ದೇಸಾಯಿ.**
4. IRDP ಅನ್ನು ವಿಸ್ತರಿಸಿ.
   **ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ.**
5. ಗ್ರಾಮೀಣ ಜನರ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿದ ಆರೋಗ್ಯ ವಿಮಾ ಯೋಜನೆಯ ಹೆಸರೇನು?
   **ಯಶಸ್ವಿನಿ.**
6. ಹಸಿರುಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?
   **ಡಾ.ಎಂ.ಎಸ್.ಸ್ವಾಮಿನಾಥನ್.**
7. ಭೂಸುಧಾರಣೆಯ ತತ್ವವೇನು?
   **'ಉಳುವವನೇ ಭೂಮಿಯ ಒಡೆಯ' ಎಂಬ ಘೋಷಣೆಯು ಭೂಸುಧಾರಣೆಯ ಮೂಲತತ್ವವಾಗಿದೆ.**
8. "ದಿ ರಿಮೆಂಬರ್ಡ್ ವಿಲ್ಲೇಜ್" ಎಂಬ ಗ್ರಂಥದ ಕರ್ತೃ ಯರು?
   **ಎಂ.ಎನ್.ಶ್ರೀನಿವಾಸ**
9. ಗ್ರಾಮೀಣ ಅಭಿವೃದ್ಧಿ ಎಂದರೇನು?
   **ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸುಧಾರಣೆ ತರುವ ಪ್ರಕ್ರಿಯೆಯನ್ನು ಗ್ರಾಮೀಣಾಭಿವೃದ್ಧಿ ಎನ್ನಬಹುದು.**
10. CDP ಅನ್ನು ವಿಸ್ತರಿಸಿ.
    **Community Development Programme ಸಮುದಾಯ ಅಭಿವೃದ್ಧಿ ಯೋಜನೆ**
11. ಗ್ರಾಮೀಣ ಸಮುದಾಯದ ಯಾವುದಾದರೊಂದು ಸಮಸ್ಯೆಯನ್ನು ತಿಳಿಸಿ.
    **ಸಾಮಾಜಿಕ ಸಮಸ್ಯೆ, ಕೃಷಿ ಸಂಬಂದಿತ ಸಮಸ್ಯೆ. ಆರ್ಥಿಕ ಸಮಸ್ಯೆ**
12. ಭಾರತೀಯ ನಗರಗಳ ಯಾವುದಾದರೊಂದು ಸಮಸ್ಯೆಯನ್ನುತಿಳಿಸಿರಿ.
    **ಎ)ಕೊಳಚೆ ಪ್ರದೇಶ. ಬಿ) ನಗರ ಬಡತನ**
13. ಕೊಳಚೆ ಪ್ರದೇಶದ ಒಂದು ಲಕ್ಷಣವನ್ನು ತಿಳಿಸಿ.
    **ಎ)ಶಿಥಿಲ ಮತ್ತು ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು. ಬಿ)ಅತಿಯಾದ ಜನಸಾಂದ್ರತೆ**

### ಎರಡು ಅಂಕದ ಪ್ರಶ್ನೆಗಳು

1. ಭಾರತೀಯ ಗ್ರಾಮಗಳ ಎರಡು ಸಾಮಾಜಿಕ ಸಮಸ್ಯೆಗಳನ್ನು ಬರೆಯಿರಿ.
   **ಬಡತನ, ಜಾತಿವ್ಯವಸ್ಥೆ.**
2. ರೈತರ ಆತ್ಮಹತ್ಯೆಗೆ ಯಾವುದಾದರೂ ಎರಡು ಒತ್ತಡಕಾರಕಗಳನ್ನು ತಿಳಿಸಿ.
   **ಕುಟುಂಬ ಸದಸ್ಯರ ಅನಾರೋಗ್ಯ, ಭಾರಿ ಪ್ರಮಾಣದ ಸಾಲ, ಹಾಗೂ ಕೌಟುಂಬಿಕ ಕಲಹ.**
3. ದೇಶಪಾಂಡೇ ಮತ್ತು ಸರೋಜ ಅರೋರ ಪ್ರಕಾರ ರೈತರ ಆತ್ಮಹತ್ಯೆಗೆ ಎರಡು ಕಾರಣಗಳನ್ನು ಬರೆಯಿರಿ.
   **ಘಟನೆಗಳು, ಒತ್ತಡಕಾರಕಗಳು, ಕಾರಣಕರ್ತರು ಹಾಗೂ ಪ್ರಚೋದಕಗಳು.**
4. ಯಾವುದಾದರೂ ಎರಡು ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ತಿಳಿಸಿ.
   **ಸಮುದಾಯ ಅಭಿವೃದ್ಧಿ ಯೋಜನೆ ಹಾಗೂ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ.**
5. ಭಾರತೀಯ ಗ್ರಾಮಗಳ ಎರಡು ಲಕ್ಷಣಗಳನ್ನು ತಿಳಿಸಿ.
   **ಎ) ಚಿಕ್ಕ ಗಾತ್ರ. ಬಿ) ಪ್ರಾಥಮಿಕ ಸಂಬಂಧಗಳ ಪ್ರಾದಾನ್ಯತೆ. ಸಿ) ಸಾಮಾಜಿಕ ಸಮೈಕ್ಯತೆ ಡಿ) ಅನೌಪಚಾರಿಕ ಸಾಮಾಜಿಕ ನಿಯಂತ್ರಣ. ಇ) ಕೃಷಿ ಮತ್ತು ಕೃಷಿ ಸಂಬಂಧಿತ ವೃತ್ತಿಗಳು.**
6. ಕೊಳಚೆ ಪ್ರದೇಶದ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
   **ಎ) ಶಿಥಿಲ ಮತ್ತು ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು. ಬಿ) ಅತಿಯಾದ ಜನಸಾಂದ್ರತೆ ಸಿ) ಮೂಲಭೂತ ಸೌಕರ್ಯಗಳ ಕೊರತೆ**
7. ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರ ಕೈಗೊಂಡ ಯಾವುದಾದರೂ ಎರಡು ಕ್ರಮಗಳನ್ನು ತಿಳಿಸಿ.
   **ಎ) ಸಾಲಮನ್ನಾ ಮತ್ತು ವಿನಾಯತಿ. ಬಿ) ಆರೋಗ್ಯ ವಿಮಾ ಯೋಜನೆ. ಸಿ) ಬೆಳೆ ವಿಮೆ.**
8. ಕೊಳಚೆ ಪ್ರದೇಶಗಳ ಬೆಳವಣಿಗೆಗೆ ಕಾರಣವಾದ ಎರಡು ಅಂಶಗಳನ್ನು ಬರೆಯಿರಿ.
   **ಎ) ನಗರ ಜೀವನ ಶೈಲಿ. ಬಿ) ನಗರದಲ್ಲಿ ಉದ್ಯೋಗ ಲಭ್ಯತೆ. ಸಿ) ವಸತಿ ಸಮಸ್ಯೆ.**
9. ಗ್ರಾಮ ಪಂಚಾಯತಿಯ ಎರಡು ಕಾರ್ಯಗಳನ್ನು ತಿಳಿಸಿ.
   **ಎ) ಕುಡಿಯುವ ನೀರಿನ ಸೌಲಭ್ಯ. ಬಿ) ಬಾವಿ ಮತ್ತು ಕೆರೆಗಳ ನಿರ್ಮಾಣ. ಸಿ) ರಸ್ತೆ ದುರಸ್ತಿ.**
10. ಭಾರತೀಯ ನಗರದ ಎರಡು ಸಮಸ್ಯೆಗಳನ್ನು ತಿಳಿಸಿ.
    **ಎ) ನಗರದ ಬಡತನ. ಬಿ) ಕೊಳಚೆ ಪ್ರದೇಶ. ಸಿ) ಕೈಗಾರಿಕಾ ಅಪಘಾತಗಳು ಮತ್ತು ರೋಗಗಳು ಡಿ) ನಗರದ ಇತರೆ ಸಮಸ್ಯೆಗಳು.**
11. ಗ್ರಾಮ ಅಧ್ಯಯನದ ಮಹತ್ವವನ್ನು ಬರೆಯಿರಿ
    **ಎ) ಗ್ರಾಮೀಣ ಅಧ್ಯಯನದ ಎರಡು ಮಹತ್ವವನ್ನು ತಿಳಿಸಿ. ಬಿ) ಕ್ಷೇತ್ರ ಕಾರ್ಯವು ಗಾಂಥಿಕ ದೃಷ್ಟಿಗೆ ಪರಿಹಾರವಾಗಿದೆ. ಸಿ) ಬದಲಾವಣೆಗೆ ಉದ್ದೇಶ ಪೂರ್ವಕ ಪ್ರತಿರೋಧ. ಡಿ)ಸಾಹಿತಿಕ ಪೂರ್ವಗ್ರಹ.**
12. ಹಸಿರುಕ್ರಾಂತಿ ಎಂದರೇನು?
    **ಆಹಾರ ಬೆಳೆಗಳ ಉತ್ಪಾದನೆಯಲ್ಲಿ ಸುಧಾರಿತ ಬೀಜಗೊಬ್ಬರ ಹಾಗೂ ತಂತ್ರಜ್ಞಾನಗಳ ಬಳಕೆಯಿಂದ ಕೈಗೊಂಡ ಬೇಸಾಯ ಕ್ರಮವನ್ನು ಹಸಿರುಕ್ರಾಂತಿ ಎಂದು ಕರೆಯುವರು.**
13. ಯಾವುದಾದರೂ ಎರಡು ಕೃಷಿ ಸಂಬಂಧಿತ ವೃತ್ತಿಗಳನ್ನು ಬರೆಯಿರಿ
    **ಮೀನುಸಾಕಾಣಿಕೆ, ಕುರಿಸಾಕಣಿಕೆ, ಕೋಳಿ ಸಾಕಾಣಿಕೆ. ಬುಟ್ಟಿ ಹೆಣೆಯುವುದು.**

### ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:



Sreenivasa U K

1. ಪಂಚಾಯತ್‌ರಾಜ್‌ನ್ನು ವ್ಯಾಖ್ಯಾನಿಸಿ, ಗ್ರಾಮ ಪಂಚಾಯತಿಯ ಕಾರ್ಯಗಳನ್ನು ವಿವರಿಸಿ.
ಗ್ರಾಮೀಣ ಮಟ್ಟದಲ್ಲಿ ಅಧಿಕಾರ ನೀಡುವ (ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ) ಪಂಚಾಯತ್ ರಾಜ್ ವ್ಯವಸ್ಥೆ ಎಂದು ಕರೆಯುವರು.
ಗ್ರಾಮ ಪಂಚಾಯತಿಯ ಕಾರ್ಯಗಳುಃ 1) ಕುಡಿಯುವ ನೀರಿನ ಸೌಲಭ್ಯ. 2) ಸಣ್ಣ ನೀರಾವರಿ ನಿರ್ವಹಣೆ. 3) ಶಾಲಾ ಕಟ್ಟಡ ನಿರ್ವಹಣೆ. 4) ಕುಟುಂಬ ಯೋಜನೆ. 5) ಬಾವಿ ಮತ್ತು ಕೆರೆಗಳ ನಿರ್ಮಾಣ. 6) ಕೋಳಿ ಸಾಕಾಣಿಕೆ. 7) ಮೀನುಗಾರಿಕೆ. 8) ಕುರಿ ಸಾಕಾಣಿಕೆ. 9) ಕೃಷಿ ಮತು ಪಶು ಸಂಗೋಪನೆ. 10) ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ.

2. ಭಾರತೀಯ ಗ್ರಾಮಗಳ ಸಾಮಾಜಿಕ ಸಮಸ್ಯೆಗಳನ್ನು ವಿವರಿಸಿ.
ಸಾಮಾಜಿಕ ಸಮಸ್ಯೆಗಳುಃ 1) ಅನಕ್ಷರತೆಃ ಭಾರತೀಯ ಗ್ರಾಮಗಳ ಸಾಮಾಜಿಕ ಸಮಸ್ಯೆಗಳಲ್ಲಿ ಅನಕ್ಷರತೆಯು ಒಂದು ಸೈಕ್ಷಣಿಕ ಸಂಸ್ಥೆಗಳ ಕೊರತೆ ಶಾಲೆ ತೊರೆಯುವವರ ಸಂಖ್ಯೆಯು ಅಧಿಕವಾಗಿದ್ದು, ಕುಡಿಯುವ ನೀರಿನ ಅಭಾವ, ಸಾರಿಗೆ ಸಂಪರ್ಕದ ಸೌಲಭಯಗಳು ನಿರೀಕ್ಷಿತ ಮಟ್ಟದಲ್ಲಿಲ್ಲ. 2) ಗ್ರಾಮೀಣ ಬಡತನಃ ಎ) ಬಡತನ ನಿರ್ಮೂಲನ ಕಾರ್ಯಕ್ರಮಗಳ ಅಸಮರ್ಪಕ ಅನುಷ್ಠಾನ. ಬಿ) ಕೃಷಿಯೇತರ ವೃತ್ತಿಗಳ್ಳಲ್ಲಿ ಸೀಮಿತ ಜನರ ಭಾಗವಹಿಸುವಿಕೆ. ಸಿ)ನೀರಾವರಿ ಸೌಲಭ್ಯಗಳ ಅಲಭ್ಯತೆ. ಕಡಿಮೆ ಮಳೆಯ ಪ್ರಮಾಣ. ಡಿ) ಸಾಂಪ್ರದಾಯಿಕ ವ್ಯವಸಾಯದ ಮೇಲಿನ ಅವಲಂಬನೆ. ಇ)ಗುಣಮಟ್ಟವಿಲ್ಲದ ಜಾನುವಾರಗಳ ಸಾಕಣಿಕೆ

3. ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ವಿವರಿಸಿ.
ಪಂಚವಾರ್ಷಿಕ ಯೋಜನೆಯ ಮೂಲಕ ಗ್ರಾಮೀಣ ಸಾಮಾಜಿಕ ಹಾಗೂ ಆರ್ಥಿಕ ಜೀವನ ಮಟ್ಟ ಸುಧಾರಿಸುವ ಸಲುವಾಗಿ ಸಮುದಾಯ ಅಭಿವೃದ್ದೀ ಯೋಜನೆಯನ್ನು ಅಕ್ಟೋಬರ್ 2, 1952ರಲ್ಲಿ ಅನುಷ್ಠಾನಕ್ಕೆ ತರಲಾಯಿತು
ಉದ್ದೇಶಗಳುಃ ಎ) ಉದ್ಯೋಗವಕಾಶಗಳನ್ನು ಕಲ್ಪಿಸುವುದು. ಬಿ) ಮಾನವ ಸಂಪನ್ಮೂಲಗಳ ಸದ್ಬಳಕೆ. ಸಿ) ಗ್ರಾಮೀಣ ನಾಗರೀಕರಿಗೆ ಯವುದೇ ಸೌಲಭ್ಯಗಳ ಕೊರತೆಯಾಗದಂತೆ ನೋಡಿಕೊಳ್ಳುವುದು. ಡಿ) ಅಗತ್ಯ ಆಹಾರವನ್ನು ದೊರೆಯುವಂತೆ ನೋಡಿಕೊಳ್ಳುವುದು. ಇ) ಕೃಷಿ ಕ್ಷೇತ್ರದಲ್ಲಿ ಗರಿಷ್ಟ ಪ್ರಮಾಣದ ಉತ್ಪಾದನೆಯಾಗುವಂತೆ ನೋಡಿಕೊಳ್ಳುವುದು.
ಕೆಲವು ಸಮುದಾಯ ಅಭಿವೃದ್ಧಿ ಯೋಜನೆಗಳು ಃ ಎ) ಸಮಗ್ರ ಗಾಮೀಣಾಭಿವೃದ್ಧಿ ಯೋಜನೆ. ಬಿ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಿ) ಪಿ.ಎಂ.ಜೆ.ವೈ. ಡಿ)ಪಿ.ಎಂ.ವೈ. ಇನ್ನೂ ಮುಂತಾದವುಗಳು.

4. ಗ್ರಾಮ ಅಧ್ಯಯನದ ಮಹತ್ವವನ್ನು ವಿವರಿಸಿ.
ಗ್ರಾಮೀಣ ಅಧ್ಯಯನದ ಮಹತ್ವ ಃ 1) ಕ್ಷೇತ್ರ ಕಾರ್ಯವು ಗಾಂಥಿಕ ದೃಷ್ಟಿಗೆ ಪರಿಹಾರವಾಗಿದೆ. 2) ಬದಲಾವಣೆಗೆ ಉದ್ದೇಶ ಪೂರ್ವಕ ಪ್ರತಿರೋಧ. 3) ಸಾಹಿತಿಕ ಪೂರ್ವಗ್ರಹ. 4) ಅನಂತರದ ಮೌಲ್ಯ ಮಾಪನವನ್ನು ದಾಖಲಿಸುವುದು. 5) ವಿಶ್ಲೇಷಣಾತ್ಮಕ ವಿಭಾಗಗಳ ಬೆಳವಣಿಗೆ ಸಹಾಯಕ. 6) ಗ್ರಾಮ ಅಧ್ಯಯನಗಳು ಸಾಮಾಜಿಕ ಸುಧಾರಣೆಗೆ ಸಹಕಾರಿಯಾಗಿದೆ.

5. ಗ್ರಾಮದ ಯಾವುದಾದರೂ ಐದು ಲಕ್ಷಣಗಳನ್ನು ವಿವರಿಸಿ.
1) ಚಿಕ್ಕ ಗಾತ್ರ. 2) ಪ್ರಾಥಮಿಕ ಸಂಬಂಧಗಳ ಪ್ರಾಧ್ಯಾನ್ಯತೆ. 3) ಸಾಮಾಜಿಕ ಸಮೈಕ್ಯತೆ. 4) ಅನೌಪಚಾರಿಕ ಸಾಮಾಜಿಕ ನಿಯಂತ್ರಣ. 5) ಕೃಷಿ ಮತ್ತು ಕೃಷಿ ಸಂಬಂಧಿತ ವೃತ್ತಿಗಳು. 6) ನೆರೆಹೊರೆ ಮತ್ತು ಸರಳ ಜೀವನ 7) ಗ್ರಾಮೀಣ ಸ್ವಯಂ ಪರಿಪೂರ್ಣತೆ. 8) ಮೂಡನಂಬಿಕೆ. 9) ಅನಕ್ಷರತೆ.

6. ಭಾರತೀಯ ಗ್ರಾಮಗಳ ಕೃಷಿ ಮತ್ತು ಆರ್ಥಿಕ ಸಮಸ್ಯೆಗಳನ್ನು ವಿವರಿಸಿ.
ಆರ್ಥಿಕ ಮತ್ತು ಕೃಷಿ ಸಮಸ್ಯೆಗಳುಃ 1) ಅಸಮಾನತೆಯ ಹೆಚ್ಚಳ. 2) ತಾರತಮ್ಯ ನೀತಿಗಳು. 3)ಕೃಷಿ ಕ್ಷೇತ್ರದ ಸಂಧಿಗ್ದ ಸ್ಥಿತಿ. 4) ಪರಿಸರ ನಾಶ. 6) ವ್ಯವಸಾಯಕ್ಕೆ ತಗಲುವ ಖರ್ಚಿನ ಹೆಚ್ಚಳ. 7) ಜಾಗತೀಕರಣದ ಸ್ಪರ್ಧೆ. 8) ಸಹಕಾರಿ ವಲಯದ ವೈಫಲ್ಯತೆ.

7. ಕೃಷಿ ಸಂಕಷ್ಟವನ್ನುತಿಳಿಯಲು ಕರ್ನಾಟಕ ಸರ್ಕಾರ ರಚಿಸಿದ ಎರಡು ಸಮಿತಿಗಳನ್ನು ವಿವರಿಸಿ.
ಎ) ದ್ವಾರಕನಾಥ ಸಮಿತಿಃ ಕೃಷಿ ಸಂಬಂಧಿತ ವಿಷಯಗಳನ್ನು ಅಧ್ಯಯನ ಮಾಡಲು ಕರ್ನಾಟಕ ಸರ್ಕಾರವು ಕೃಷಿ ವಿಜ್ಞಾನಿಯಾದ ದ್ವಾರಕನಾಥರ ನೇತೃತ್ವದಲ್ಲಿ 2000 ನೇ ಇಸ್ವಿಯಲ್ಲಿ ಸಮಿತಿಯನ್ನು ರಚಿಸಿತು. 'ಬಿಟಿ ತಳಿ ಹತ್ತಿಯ ಪರೀಕ್ಷೆ', 'ಜೈವಿಕ ತಂತ್ರಜ್ಞಾನ' 'ಹೈಬ್ರೀಡ್ ಭತ್ತದ ಪಾತ್ರ' ಇನ್ನೂ ಮುಂತಾದ ಅಧ್ಯಯನಗಳನ್ನು ಸಮಿತಿಯು ಕೈಗೊಂಡಿದೆ.
ಬಿ) ಜಿ.ಕೆ.ವಿರೇಶ ಸಮಿತಿಃ 2002ರಲ್ಲಿ ರಚಿತವಾದ ಜಿ.ಕೆ.ವಿರೇಶ ಸಮಿತಿಯು ಆತ್ಮಹತ್ಯೆಗಳನ್ನು ಮನಃಶಾಸ್ತ್ರೀಯ ಮತ್ತು ವೈಯಕ್ತಿಕ ಕಾರಣಗಳ ಹಿನ್ನಲೆಯಲ್ಲಿ ವಿವರಿಸಿದೆ. 1)ಕುಡಿತ, ಜೂಜು, ಮಿತಿಮೀರಿದ ಖರ್ಚುಮಾಡುವಿಕೆ. 2)ಬೆಳೆಯ ವೈಫಲ್ಯ. 3) ಚಿಟ್‌ಫಂಡ್. 4) ಕೌಟುಂಬಿಕ ಸಮಸ್ಯೆಗಳು. 5) ಅನಾರೋಗ್ಯ. 6) ಹೆಣ್ಣುಮಕ್ಕಳ ವಿವಾಹ. ಹಾಗೂ ಸಾಲಬಾಧೆಯ ಕುರಿತು ಅಧ್ಯನ ಮಾಡಿದೆ.

8. ರೈತರ ಆತ್ಮಹತ್ಯೆಯನ್ನು ತಡೆಗಟ್ಟಲು ಸಕಾರ ಇತ್ತೀಚಿಗೆ ಕೈಗೊಂಡ ಕ್ರಮಗಳನ್ನು ವಿವರಿಸಿ.
ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳುಃ 1) ಸಾಲಮನ್ನಾ ಮತ್ತು ವಿನಾಯತಿ.2) 2004ರ ಅತ್ಯಧಿಕ ಬಡ್ಡಿದರ ಕಾಯಿದೆ. 3) ರೈತರ ಸಂಕಷ್ಟಗಳಿಗೆ ಪ್ರತಿಕ್ರಿಯೆ ಃ ಎ) ಆರೋಗ್ಯ ವಿಮಾ ಯೋಜನೆ. ಬಿ) ಬಡ್ಡಿದರ ಇಳಿಕೆ. ಸಿ) ಪರಿಹಾರ ನೀಡುವ ನೀತಿಯ ಪುನರ್ವಿಮರ್ಶೆ. ಡಿ) ಮಾಹಿಯಿ ಸೌಲಭ್ಯ. ಇ) ಬೆಳೆ ವಿಮೆ. ಎಫ್) ರೈತ ಕಲ್ಯಾಣ ನಿಧಿಯ ಸ್ಥಾಪನೆ

## ಅಧ್ಯಾಯ ಃ 6 ಮಾರುಕಟ್ಟೆ ಮತ್ತು ಸಂವಹನ ವ್ಯವಸ್ಥೆಗಳು

### ಒಂದು ಅಂಕದ ಪ್ರಶ್ನೆಗಳು

1. TRP ಅನ್ನು ವಿಸ್ತರಿಸಿ. **ದೂರದರ್ಶನ ಅಳತೆ ಬಿಂದು (Telivision Rating Point)**
2. ಮಾರುಕಟ್ಟೆಯ ಒಂದು ಲಕ್ಷಣವನ್ನು ತಿಳಿಸಿ.
**ವಸ್ತುಗಳನ್ನು ಕೊಳ್ಳುವ ಮಾರುವ ಸ್ಥಳವೇ ಮಾರುಕಟ್ಟೆ.**
3. www ಕಂಡು ಹಿಡಿದವರು ಯಾರು? **ಉತ್ತರಃ ಟೀಮ್ ಬರ್ನರ್ ಲೀ(1990)**
4. ಭಾರತದ ಪ್ರಥಮ ವಾರ್ತ ಪತ್ರಿಕೆ ಯಾವುದು? **ಉತ್ತರಃದಿ ಬೆಂಗಾಲಿ ಗೆಜೆಟ್.**
5. www ಅನ್ನು ವಿಸ್ತರಿಸಿರಿ. **ಉತ್ತರಃವರ್ಲ್ಡ್ ವೈಡ್ ವೆಬ್ (World Wide Web)**
6. ಭಾರತದ ಯಾವುದಾದರೂ ಒಂದು ವ್ಯಾಪಾರಿ ಸಮುದಾಯವನ್ನು ಹೆಸರಿಸಿ.
**ತಮೀಳುನಾಡಿನ ನಗರ್ತಕರು. ಮಾರ್ವಾಡಿಗಳು,**
7. ದೊರಾಯಿ ಜಾತ್ರೆಯನ್ನು ಅಧ್ಯಯನಮಾಡಿದ ವ್ಯಕ್ತಿ ಯಾರು? **ಉತ್ತರಃ ಆಲಫ್ರೆಡ್ ಗೇಲ್ 1982ರಲ್ಲಿ**
8. ಕನ್ನಡದ ಪ್ರಪ್ರಥಮ ದಿನ ಪತ್ರಿಕೆ ಯಾವುದು? **ಉತ್ತರಃ ಮಂಗಳೂರು ಸಮಾಚಾರ**
9. 1849 ರಲ್ಲಿ ಪ್ಯಾರೀಸ್ ನಲ್ಲಿ ಪಾರಿವಾಳಗಳ ಹಾಗೂ ಟೆಲಿಗ್ರಾಫ್ ಮೂಲಕ ವಾರ್ತಾ ಸೇವೆ ಆರಂಭಿಸಿದವರು ಯಾರು? **ಉತ್ತರಃ ಪಾಲ್ ಜೂಲಿಯಸ್ ರಿಯುಟರ್.**

Sreenivasa U K

10. ಮುದ್ರಣ ಯಂತ್ರವನ್ನು ಮೊದಲು ಕಂಡುಹಿಡಿದವರು ಯಾರು ?
**ಜರ್ಮನಿಯ ಜಾನ್ ಗುಟೇನ್ ಬರ್ಗ್**

11. ಭಾರತದಲ್ಲಿ ಮೊಟ್ಟ ಮೊದಲು ರೇಡಿಯೋ ಯಾವಾಗ ಆರಂಭವಾಯಿತು?
**1920 ರಲ್ಲಿ ಚೆನ್ನೈ ಮತ್ತು ಕಲ್ಕತ್ತದಲ್ಲಿ.**

12. ಭಾರತದಲ್ಲಿ ಟಿ ವಿ ಆರಂಭವಾದದ್ದು ಯಾವಾಗ? **ಉತ್ತರ:1959 ರಲ್ಲಿ.**

13. ಮಾಧ್ಯಮದ ದೊರೆ ಎಂದು ಯಾರನ್ನು ಕರೆಯುತ್ತಾರೆ.?-**ಆಸ್ಟ್ರೇಲಿಯಾದ ರೂಫೋರ್ಟ್ ಮರ್ಡೋಕ್**

14. ಮಾಧ್ಯಮವನ್ನು ಸಾಮಾಜಿಕ ಬಂಡವಾಳ ಎಂದು ಹೋಲಿಕೆ ಮಾಡಿದ ಹೇಳಿಕೆ ನೀಡಿದವರಾರು ?
**ರಾಬರ್ಟ ಪುಟ್ನಂ**

15. ಸಮೂಹ ಮಾಧ್ಯಮವನ್ನು ಕೃತಕ ನೈಜತೆ ಎಂದು ಕರೆದವರಾರು? **ಉತ್ತರ: ಜೀನ್ ಬುಡ್ರಿಲಾರ್ಡ.**

## ಎರಡು ಅಂಕದ ಪ್ರಶ್ನೆಗಳು

1. ಸಮೂಹ ಮಾಧ್ಯಮದ ಎರಡು ಪ್ರಕಾರಗಳನ್ನು ತಿಳಿಸಿ.
ಮುದ್ರಣ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮ.

2. ಸಾಮಾಜಿಕ ಸಂಪರ್ಕ ತಾಣ ಎಂದರೇನು ?
ಆನ್ ಲೈನ್ ಅಥವಾ ಅಗೋಚರ ವೇದಿಕೆಗಳ ಮೂಲಕ ಗೆಳೆತನ, ಒಂದು ಸಮೂಹಕ್ಕೆ ಸೇರ್ಪಡೆ, ಹೊಸ ಗೆಳೆತನ, ಹೊಸ ಗೆಳೆತನದ ಸಂಪರ್ಕ, ಸಮಾನ ಆಸಕ್ತಿಗಳ ಆಧಾರದ ಮೇಲೆ ವಿಷಯ ಹಂಚಿಕೊಳ್ಳುವುದು ಇತ್ಯಾದಿ ನಡೆಸಲು ಸಾಧ್ಯವಾಗುವುದನ್ನು ಸಾಮಾಜಿಕ ಸಂಪರ್ಕ ತಾಣಗಳು ಎನ್ನುತ್ತಾರೆ.

3. ಮಾರುಕಟ್ಟೆಯ ಎರಡು ಲಕ್ಷಣಗಳನ್ನು ತಿಳಿಸಿ.
**ಎ) ವಸ್ತುಗಳನ್ನು ಕೊಳ್ಳುವ – ಮಾರುವ ಸ್ಥಳವೇ ಮಾರುಕಟ್ಟೆ. ಬಿ) ಮಾರುಕಟ್ಟೆ ಎಂಬುದು ಕೇವಲ ಭೌತಿಕ ಪ್ರದೇಶವಾಗಿಲ್ಲ. ಸಿ) ಮಾರುಕಟ್ಟೆಯು ಒಂದು ರೀತಿಯ ವ್ಯಾಪಾರ ಅಥವಾ ವಾಣಿಜ್ಯವಾಗಿದೆ. ಡಿ) ಮಾರುಕಟ್ಟೆಯು ಆರ್ಥಿಕ ಚಟುವಟಿಕೆಗಳ ಮತ್ತು ಸಂಸ್ಥೆಗಳ ಸಮಗ್ರ ಚಿತ್ರಣವಾಗಿದೆ.**

4. ಕನ್ನಡದ ಯಾವುದಾದರೂ ಎರಡು ಜನಪ್ರಿಯ ವಾರ್ತವಾಹಿನಿಗಳನ್ನು ಹೆಸರಿಸಿ.
ಟಿ.ವಿ9 ಕನ್ನಡ, ಪಬ್ಲಿಕ್ ನ್ಯೂಸ್, ಕಸ್ತೂರಿ ನ್ಯೂಸ್, ಸುವರ್ಣ24**x**7. ಹಾಗೂ ದಿಗ್ವಿಜಯ ನ್ಯೂಸ್.

5. ಭಾರತದ ಯಾವುದಾದರೂ ಎರಡು ಸಾಂಪ್ರದಾಯಿಕ ವ್ಯಾಪಾರಿ ಸಮುದಾಯಗಳನ್ನು ಹೆಸರಿಸಿ.
ಮಾರ್ವಾಡಿಗಳು, ನಗರ್ತಕರು, ಬನಿಯ.

6. ಮಾರುಕಟ್ಟೆ ಎಂದರೇನು?
ಎ) ವಸ್ತುಗಳು ಹಾಗೂ ಸೇವೆಗಳನ್ನು ಕೊಳ್ಳುವ ಹಾಗೂ ಮಾರಟ ಮಾಡುವ ವ್ಯವಸ್ಥೆಯೆ ಮಾರುಕಟ್ಟೆ ಎನ್ನುವರು.
ಅಥವಾ ಬಿ) ಮಾರುಕಟ್ಟೆಯು ಒಂದು ಪ್ರಮುಖವಾದ ಸಾಮಾಜಿಕ ಸಂಸ್ಥೆಯಾಗಿದ್ದು ಇಲ್ಲಿ ವ್ಯಕ್ತಿಗಳು ವಸ್ತುಗಳು ಮತ್ತು ಸೇವೆಗಳ ವಿನಿಮಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.

7. ದೂರದರ್ಶನ ಜನಪ್ರಿಯತೆಗೆ ಕಾರಣವಾದ ಯಾವುದಾದರೂ 2 ಮಹಾಕಾವ್ಯಗಳ ಹೆಸರು ತಿಳಿಸಿ.
ರಾಮಾಯಣ, ಮಹಾಭಾರತ ಹಾಗೂ ಹನುಮಾನ್ ಛಾಲಿಸ್.

8. ಅಗೋಚರ ಮರುಕಟ್ಟೆ ಎಂದರೇನು?
ಅಂತರ್ ಜಾಲತಾಣಗಳ ಮೂಲಕ ಮಾಹಿತಿ ಸಾಧನ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ವಸ್ತುಗಳ ಮಾರಾಟ ಹಾಗೂ ಕೊಂಡುಕೊಳ್ಳುವ ಪ್ರಕ್ರಿಯೆಗೆ ವರ್ಚುವಲ್ ಮಾರುಕಟ್ಟೆ ಅಥವಾ ಅಗೋಚರ ಮಾರುಕಟ್ಟೆ ಎನ್ನುವರು.

9. ಮ್ಯಾಕ್‌ಡೋನಾಲ್ಡೀಕರಣ ಎಂದರೇನು?
ಫಾಸ್ಟ್‌ಪುಡ್ ಮತ್ತು ಇದರ ರೆಸ್ಟೋರೆಂಟ್ ಸಂಸ್ಕೃತಿಯು ಅಮೇರಿಕಾ ಮತ್ತು ಪ್ರಪಂಚದ ಇನ್ನಿತರ ಭಾಗಗಳಲ್ಲಿ ಪ್ರಭಾವ ಬೀರುತ್ತಿರುವುದನ್ನು ಮ್ಯಾಕ್‌ಡೋನಾಲ್ಡೀಕರಣ ಎನ್ನುವರು.

10. ಯಾವುದಾದರೂ ಎರಡು ಆನ್‌ಲೈನ್ ಶಾಪಿಂಗ್ ತಾಣಗಳನ್ನು ಹೆಸರಿಸಿ.
ಫ್ಲಿಪ್‌ಕಾರ್ಟ್, ಅಮೇಜಾನ್, ಸ್ನ್ಯಾಫ್‌ಡೀಲ್, ಅಜಿಯೋ.ಇತ್ಯಾದಿ.

11. ಜಾರ್ಜ ರಿಟ್ಜರ್ ಬಳಸಿದ ಮಾಕ್‌ಡೊನಾಲ್ಡ ಕಂಪನಿಯ 2 ಮಾರ್ಗದರ್ಶಕ ತತ್ವಗಳನ್ನು ತಿಳಿಸಿ.
1. ದಕ್ಷತೆ. 2. ಲೆಕ್ಕಾಚಾರ. 3. ಸಮರೂಪತೆ. 4. ಸ್ವಯಂ ಚಾಲನೆ

12. ಸಮೂಹ ಮಾಧ್ಯಮದ ಯಾವುದಾದರೂ ಎರಡು ಕಾರ್ಯಗಳನ್ನು ಹೆಸರಿಸಿ.
ಎ) ಮಾಹಿತಿ. ಬಿ) ಮನರಂಜನೆ. ಸಿ) ನಿರಂತರತೆ. ಡಿ) ಹೊಂದಾಣಿಕೆ. ಇ) ಕ್ರೋಢೀಕರಣ.

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಪುಷ್ಕರ್ ಜಾತ್ರೆಯ ಬಗ್ಗೆ ಟಿಪ್ಪಣಿ ಬರೆಯಿರಿ.
1) ಪುಷ್ಕರ್ ಜಾತ್ರೆ ವಾರ್ಷಿಕವಾಗಿ ಐದು ದಿನ ನಡೆಯುವ ಒಂಟೆ ಮತ್ತು ಜಾನುವಾರುಗಳ ಜಾತ್ರೆಯಾಗಿದೆ. 2) ಒಂಟೆಗಳ ಮಾರಾಟ ಮತ್ತು ಕೊಳ್ಳುವುದರ ಜೊತೆಗೆ ಪ್ರವಾಸಿಗರನ್ನು ಆಕರ್ಷಿಸುವ ಕೇಂದ್ರವಾಗಿದೆ. 3) ಒಂಟೆ, ದನ, ಮೇಕೆ ಮುಂತಾದ ಪ್ರಾಣಿಗಳ ಮಾರಾಟ ಮತ್ತು ಕೊಳ್ಳುವದು ನಡೆಯುತ್ತದೆ. 4) ಸ್ಥಳೀಯ ಪುಷ್ಕರ್ ಕ್ರೀಡಾ ತಂಡ ವಿದೇಶಿಯರ ಗುಂಪಿನೊಂದಿಗೆ ಕ್ರಿಕೆಟ್ ಮುಂತಾದ ಪಂದ್ಯಗಳನ್ನು ಏರ್ಪಡಿಸಲಾಗುತ್ತದೆ. 5) ಹೆಂಗಸರು ಬಳೆ, ಆಟಿಕೆ, ಬಟ್ಟೆ, ಆಭರಣಗಳನ್ನು ಕೊಂಡುಕೊಳ್ಳುತ್ತಾರೆ. 6) ಈ ಜಾತ್ರೆಯು ಕಾರ್ತಿಕ ಮಾಸದ ಏಕಾದಶಿಯಿಂದ ಹುಣ್ಣಿಮೆಯವರೆಗೆ 5 ದಿನಗಳ ವರೆಗೆ ನಡೆಯುತ್ತದೆ. 7) ಒಂಟೆ ಓಟದ ಸ್ಪರ್ಧೆ, ಹಾಡು, ಸಂಗೀತ, ಪ್ರದರ್ಶನ ಕಲೆಗಳು, ಮೀಸೆ ಪ್ರದರ್ಶನ ಈ ಜಾತ್ರೆಯ ಆಕರ್ಷಣೆ. 8) ಪುಷ್ಕರ್ ಸರೋವರದಲ್ಲಿ ಬ್ರಹ್ಮನು ಸ್ನಾನ ಮಾಡಿದ್ದನೆಂಬ ನಂಬಿಕೆಯಿಂದ ಅಪಾರ ಸಂಖ್ಯೆಯ ಭಕ್ತರು ಪವಿತ್ರ ಸ್ನಾನ ಮಾಡುತ್ತಾರೆ.

2. ಸಾಮಾಜಿಕ ಸಂಪರ್ಕ ತಾಣಗಳ ಬಗ್ಗೆ ಟಿಪ್ಪಣೆ ಬರೆಯಿರಿ.
1) ಸಾಮಾಜಿಕ ಸಂಪರ್ಕ ತಾಣಗಳು ಆನಲೈನ್ ಅಥವಾ ಅಗೋಚರ ವೇದಿಕೆಗಳಾಗಿ ಸಾಮಾನ್ಯ ಆಸಕ್ತಿಗಳನ್ನು ಹಂಚಿಕೊಳ್ಳುವ ಅಂರ್ತಜಾಲ ತಾಣಗಳಾಗಿದೆ. 2. ಹೊಸ ವ್ಯಕ್ತಿಗಳ ಜೊತೆ ಸಂಪರ್ಕ. 3. ಸಮಾನ ಆಸಕ್ತಿಗೆ ಅನುಗುಣವಾಗಿ ವಿಷಯಗಳನ್ನು ಹಂಚಿಕೊಳ್ಳುವದು. 4. ಚರ್ಚೆಯಲ್ಲಿ ಭಾಗವಹಿಸುವುದು.5. ಭಾರತವು ಸಾಮಾಜಿಕ ಸಂಪರ್ಕ ತಾಣಗಳ ಬಳಕೆಯಲ್ಲಿ ಅಮೇರಿಕಾ ಚೀನಾ ನಂತರ ಮೂರನೇ ಸ್ಥಾನದಲ್ಲಿದೆ.

3. ಸಮೂಹ ಮಾಧ್ಯಮಗಳ ಮೇಲೆ ಜಾಗತೀಕರಣದ ಪ್ರಭಾವವನ್ನು ವಿವರಿಸಿ.
1) ರಾಷ್ಟ್ರೀಯ ಮಾರುಕಟ್ಟೆಗಳು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಜಾಗತಿಕ ಮಾರುಕಟ್ಟೆಗಳಾಗಿ ಪರಿವರ್ತನೆಯಾಗುತ್ತಿದೆ. 2) ಅಂತರಜಾಲದ ಬೆಳವಣಿಗೆಯಿಂದ ಮುದ್ರಣ ಮಾಧ್ಯಮಕ್ಕೆ ಅಲ್ಪ ಹಿನ್ನಡೆ ಆಗಿದೆ. 3) ಜಾಗತೀಕರಣದಿಂದ ಪ್ರಾಂತೀಯ ಮುದ್ರಣ ಮಾಧ್ಯಮ ಇಂದು ತೀವ್ರ ಬೆಳವಣಿಗೆ

Sreenivasa U K

ಹೊಂದಿದೆ. 4) ಮುದ್ರಣ ಮಾಧ್ಯಮದವರು ವಿದ್ಯುನ್ಮಾನ ಮಾಧ್ಯಮದ ಪ್ರಯೋಜನ ಪಡೆದು ತಮ್ಮ ಪಸಾರದ ಸಂಖ್ಯೆ ಹೆಚ್ಚಿಸಿಕೊಂಡವು. 5)1990 ನಂತರ ಖಾಸಗಿ ಉಪಗ್ರಹ ಆಧಾರಿತ ಚಾನೆಗಳ ಸಂಖ್ಯೆ ದ್ವಿಗುಣಗೊಂಡಿತು. 6) 1991 ರಲ್ಲಿ ಕೊಲ್ಲಿ ಯುದ್ಧವನ್ನು ಸಿ.ಎನ್.ಎನ್. ನೇರವಾಗಿ ಪ್ರಸಾರ ಮಾಡಿ ಬಹಳ ಜನಪ್ರಿಯವಾಯಿತು. 7) ಜಾಗತೀಕರಣದ ಪ್ರಭಾವದಿಂದ ಇಂದು ಬಹತೇಕ ವಾರ್ತಾ ವಾಹಿನಿಗಳು ವಾರದ 24 ಗಂಟೆ ವಾರ್ತೆಯನ್ನು ಬಿತ್ತರಿಸುತ್ತಿವೆ. 8) ಸರಿ ಸುಮಾರು ಎಲ್ಲ ವಾಹಿನಿಗಳು ರಿಯಾಲಿಟಿ ಸೋಗಳನ್ನು ನಡೆಸುತ್ತಾ ಟಿ.ಆರ್.ಪಿ ಹೆಚ್ಚಿಸಿಕೊಳ್ಳಲು ಹವಣಿಸುತ್ತಿವೆ.

4. ಸಮೂಹ ಮಾಧ್ಯಮಗಳ ಕಾರ್ಯಗಳನ್ನು ವಿವರಿಸಿ.
   ಸಮೂಹ ಮಾಧ್ಯಮಗಳ ಕಾರ್ಯಗಳು:
   1) ಮಾಹಿತಿ 2) ಸಮನ್ವಯತೆ . 3.) ನಿರಂತರತೆ. 4) ಮನರಂಜನೆ. 5) ಕ್ರೋಢೀಕರಣ
5. ಮಾರುಕಟ್ಟೆ ಎಂದರೇನು? ಮಾರುಕಟ್ಟೆಯ ಲಕ್ಷಣಗಳನ್ನು ವಿವರಿಸಿ.
   ವಸ್ತುಗಳು ಹಾಗೂ ಸೇವೆಗಳನ್ನು ಕೊಳ್ಳುವ ಹಾಗೂ ಮಾರಟ ಮಾಡುವ ವ್ಯವಸ್ಥೆಯೆ ಮಾರುಕಟ್ಟೆ ಎನ್ನುವರು. **ಮಾರುಕಟ್ಟೆಯ ಲಕ್ಷಣಗಳು:** ಎ) ವಸ್ತುಗಳನ್ನು ಕೊಳ್ಳುವ – ಮಾರುವ ಸ್ಥಳವೇ ಮಾರುಕಟ್ಟೆ. ಬಿ) ಮಾರುಕಟ್ಟೆ ಎಂಬುದು ಕೇವಲ ಭೌತಿಕ ಪ್ರದೇಶವಾಗಿಲ್ಲ. ಸಿ) ಮಾರುಕಟ್ಟೆಯು ಒಂದು ರೀತಿಯ ವ್ಯಾಪಾರ ಅಥವಾ ವಾಣಿಜ್ಯವಾಗಿದೆ. ಡಿ) ಮಾರುಕಟ್ಟೆಯು ಆರ್ಥಿಕ ಚಟುವಟಿಕೆಗಳ ಮತ್ತು ಸಂಸ್ಥೆಗಳ ಸಮಗ್ರ ಚಿತ್ರಣವಾಗಿದೆ.
6. "ದೋರಾಯಿ" (ಬಸ್ತಾರ್) ಬುಡಕಟ್ಟು ಮಾರುಕಟ್ಟೆ ರಚನೆಯ ಕುರಿತು. ಟಿಪ್ಪಣಿ ಬರೆಯಿರಿ.
   1) ಸಂಪದ್ಭರಿತ ಮತ್ತು ಉನ್ನತ ಶ್ರೇಣಿಯ ರಜಪೂತರು ಆಭರಣದ ವ್ಯಾಪಾರಿಗಳು ಮತ್ತು ಮಧ್ಯ ಶ್ರೇಣಿಯ ಸ್ಥಳೀಯ ವ್ಯಾಪಾರಿಗಳು ಮಾರುಕಟ್ಟೆಯ ಮಧ್ಯವಲಯದಲ್ಲಿ ವ್ಯಾಪಾರಮಾಡುತ್ತಾರೆ. 2) ಆದಿವಾಸಿ ಸಮೂಹದ ತರಕಾರಿ ಮಾರಾಟಗಾರರು ಮತ್ತು ಸ್ಥಳೀಯ ಪಾತ್ರೆ, ಮಡಕೆ ಮಾರಾಟಗಾರರು ಮಾರುಕಟ್ಟೆಯ ಹೊರವಲಯದಲ್ಲಿ ವ್ಯಾಪಾರ ಮಾಡುತ್ತಾರೆ. 3) ಸಾಮಾಜಿಕ ಸಂಬಂಧಗಳು ವ್ಯಕ್ತಿ ಮಾರಾಟ ಮಾಡುವ ವಸ್ತುಗಳ ಗುಣಮಟ್ಟದ ಮೇಲೆ ಅವಲಂಬಿಸಿದೆ. 4) ಬಸ್ತಾರ ಮಾರುಕಟ್ಟೆಯು–ಸಂತೆಯ ಪ್ರದೇಶಗಳು ಶುಕ್ರವಾರ ಮಾತ್ರವೇ ಜನಭರಿತವಾಗಿರುತ್ತದೆ. 5) ಅರಣ್ಯಾಧಿಕಾರಿಗಳು ಸಂತೆಯ ಆಗು–ಹೋಗುಗಳ ಕುರಿತು ಗಮನ ಹರಿಸುತ್ತಾರೆ. 6) ಸಂತೆಗೆ ತರಕಾರಿ ಮಾರುವವರು, ವಿಶೇಷ ಪರಿಣಿತಿಯ ಕುಶಲಕರ್ಮಿಗಳು, ಕುಂಬಾರರು, ನೇಕಾರರು, ಕಮ್ಮಾರರು ಮುಂತಾದವರು ಬರುತ್ತಾರೆ. 7) ಬಸ್ತಾರ ಮಾರುಕಟ್ಟೆಯು ಚತುರ್ಭುಜಾಕಾರದ 100 ಗಜ ವಿಸ್ತೀರ್ಣದಲ್ಲಿದೆ.
7.

## ಅಧ್ಯಾಯ : 7 ಸಾಮಾಜಿಕ ಚಳುವಳಿ.

### ಒಂದು ಅಂಕದ ಪ್ರಶ್ನೆಗಳು

1. ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದವರು ಯಾರು?
   **ಜ್ಯೋತಿ ಬಾ ಫುಲೆ.**
2. ಕಾಗೋಡು ಸತ್ಯಾಗ್ರಹದ ಘೋಷಣೆ ಏನು?
   **ಉಳುವವನೇ ಭೂಮಿಯ ಒಡೆಯ.**
3. ಜಾತಿ ಪದ್ಧತಿಯ ವಿರುದ್ಧ ಮೊದಲು ಸಂಘಟಿತ ಹೋರಾಟ ಮಾಡಿದ ವ್ಯಕ್ತಿ ಯರು?
   **ಜ್ಯೋತಿ ಬಾ ಫುಲೆ.**
4. ಸಾಮಾಜಿಕ ಚಳುವಳಿಯ ಯಾವುದೇ ಒಂದು ಪ್ರಕಾರವನ್ನು ತಿಳಿಸಿ.
   **ಎ) ಸಮಾಜ ಸುಧಾರಣಾ ಚಳುವಳಿ. ಬಿ) ಕ್ರಾಂತಿಕಾರಿ ಚಳುವಳಿ. ಸಿ) ರೂಪಾಂತರ ಚಳುವಳಿ**
5. ಭೀಮಸೇನೆ ಆರಂಭಿಸಿದವರು ಯಾರು?
   **ಭೀಮಸೇನಾ ಪ್ರಾರಂಭಿಸಿದವರು ಬಿ.ಶಾಮಸುಂದರವರು.**
6. ಸ್ವಗೌರವ ಚಳುವಳಿಯನ್ನು ಪ್ರಾರಂಭಿಸಿದವರು ಯಾರು?
   **ಸ್ವ –ಗೌರವ ಚಳುವಳಿಯ ನೇತಾರರು – ಪೆರಿಯಾರ್ ಇ. ವಿ. ರಾಮಸ್ವಾಮಿ ನಾಯ್ಕರ್**
7. DSS ವಿಸ್ತರಿಸಿ.
   **Dalita Sangharsha Samiti**
8. ಶ್ರೀ ನಾರಾಯಣ ಗುರು ಅವರ ಸಾಮಾಜಿಕ ಕ್ರಾಂತಿಯ ಘೋಷಣೆಯೇನು?
   **ಶ್ರೀ ನಾರಾಯಣ ಗುರು ಅವರ ಸಾಮಾಜಿಕ ಕ್ರಾಂತಿಯ ಘೋಷಣೆ –'ಒಂದು ಜಾತಿ, ಒಂದು ಧರ್ಮ, ಒಬ್ಬ ದೇವರು'**
9. KRRS ವಿಸ್ತರಿಸಿ
   **Karnataka Rajya Raita Sangha ಕರ್ನಾಟಕ ರಾಜ್ಯ ರೈತ ಸಂಘ**
10. ಕರ್ನಾಟಕ ರಾಜ್ಯ ರೈತ ಸಂಘದ ನೇತಾರರನ್ನು ಹೆಸರಿಸಿ.
   **ಕರ್ನಾಟಕ ರಾಜ್ಯ ರೈತ ಸಂಘದ ನೇತಾರರು–ಪ್ರೊ.ಎಂ.ಡಿ.ನಂಜುಂಡ ಸ್ವಾಮಿ, ಎಚ್.ಎಸ್. ರುದ್ರಪ್ಪ,**

### ಎರಡು ಅಂಕದ ಪ್ರಶ್ನೆಗಳು

1. ಸಾಮಾಜಿಕ ಚಳುವಳಿ ಎಂದರೇನು?
   **ಸಾಮಾಜಿಕ ಮೌಲ್ಯಗಳು, ನಂಬಿಕೆ, ಸಂಬಂಧ, ಆದರ್ಶಗಳ ಮತ್ತು ಸಂಸ್ಥೆಗಳಲ್ಲಿ ಪರಿವರ್ತನೆ ತರುವ ಅಥವಾ ವಿರೋಧಿಸುವ ಒಂದು ಸಂಘಟಿತ ಪ್ರಯತ್ನವನ್ನು ಸಾಮಾಜಿಕ ಚಳುವಳಿ ಎನ್ನಬಹುದು.**
2. ಮಲಪ್ರಭಾ ರೈತರ ಹೋರಾಟಕ್ಕೆ ಎರಡು ಕಾರಣಗಳನ್ನು ತಿಳಿಸಿ.
   **1) ಸ್ಥಿರ ಬೆಲೆಯ ಪ್ರಶ್ನೆ. 2) ಲೆವಿಯ ಪ್ರಶ್ನೆ**
3. ಭಾರತದ ಯಾವುದಾದರೂ ಎರಡು ಮಹಿಳಾ ಸಂಘಟನೆಗಳನ್ನು ಹೆಸರಿಸಿ.
   **1) ಸ್ತ್ರೀ ಮುಕ್ತಿ ಸಂಘಟನೆ, ಮುಂಬಯಿ. 2) ಸ್ತ್ರೀ ಶಕ್ತಿ ಸಂಘಟನಾ, ಹೈದರಾಬಾದ್.**
4. ದಲಿತ ಚಳುವಳಿಯ ತತ್ವಗಳೇನು?
   **ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬದುಕಿನ ಅನ್ವೇಷಣೆಯೇ ದಲಿತ ಚಳುವಳಿಯ ಮೂಲ ಆಶಯ.**
5. ಯಾವುದಾದರೂ ಎರಡು ಸಾಮಾಜಿಕ ಚಳುವಳಿಗಳನ್ನು ಹೆಸರಿಸಿ.
   **ರೈತ ಚಳುವಳಿ, ಮಹಿಳಾ ಚಳುವಳಿ, ದಲಿತ ಚಳುವಳಿ ಹಾಗೂ ಹಿಂದುಳಿದ ವರ್ಗಗಳ ಚಳುವಳಿ.**
6. ಸಾಮಾಜಿಕ ಚಳುವಳಿಯ ಎರಡು ಪ್ರಕಾರಗಳನ್ನು ತಿಳಿಸಿ.
   **1) ಸಮಾಜ ಸುಧಾರಣಾ ಚಳುವಳಿ. 2) ಕ್ರಾಂತಿಕಾರಿ ಚಳುವಳಿ. 3) ರೂಪಾಂತರ ಚಳುವಳಿ.**
7. ಕರ್ನಾಟಕದ ಯಾವುದಾದರೂ ಎರಡು ರೈತ ಹೋರಾಟಗಳನ್ನು ತಿಳಿಸಿ.
   **ಕಾಗೋಡು ಸತ್ಯಾಗ್ರಹ ಹಾಗೂ ಮಲಪ್ರಭಾ ರೈತರ ಹೋರಾಟ.**
8. ಭಾರತದಲ್ಲಿರೈತರ ಹೋರಾಟಕ್ಕೇ ಕಾರಣವಾದ ಎರಡು ಅಂಶಗಳನ್ನು ತಿಳಿಸಿ.
   **1) ಅಧಿಕ ಕಂದಾಯ ಸಂಗ್ರಹಣೆ 2) ಬ್ರಿಟೀಷರ ಕಾಲದಿಂದ ಬುಡಕಟ್ಟು ಜನರ ಜಮೀನು ಅತಿಕ್ರಮಣ**

Sreenivasa U K

9. ರೈತರ ಚಳುವಳಿಯ ಯಾವುದೇ ಎರಡು ಪ್ರಕಾರಗಳನ್ನು ಬರೆಯಿರಿ.
**1) ಪುನರ್ ಸ್ಥಾಪನಾ ದಂಗೆಗಳು 2) ಧಾರ್ಮಿಕ ಚಳುವಳಿ. 3) ಸಮಾಜನಿಷ್ಠ ದರೋಡೆ. 4) ಭಯೋತ್ಪಾದಕ ಪ್ರತಿಕಾರಗಳು. 5) ಜನತಾ ವಿಪ್ಲವಗಳು.**

10. ಕಾಗೋಡು ಸತ್ಯಾಗ್ರಹದ ಎರಡು ಪರಿಣಾಮಗಳನ್ನು ಬರೆಯಿರಿ.
**ಕಾಗೋಡು ಸತ್ಯಾಗ್ರಹದ ಎರಡು ಪರಿಣಾಮಗಳು: 1) ಗೇಣಿದಾರರು ಈ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರಿಂದ ಸರಕಾರವು ಗೇಣಿದಾರರಿಗೆ ಮತ್ತು ಭೂರಹಿತರಿಗೆ ಮಾಲಿಕತ್ವದ ಹಕ್ಕನ್ನು ನೀಡಲೇಬೇಕಾಯಿತು. 2) ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಭೂಸುಧಾರಣೆಯನ್ನು ಕಾನೂನುಬದ್ಧಗೊಳಿಸಲಾಯಿತು.**

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಕ್ಯಾಥೋಲಿನ್ ಗೌವ್‌ರವರ ಪ್ರಕಾರ ರೈತ ಚಳುವಳಿಗೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ.
ಕ್ಯಾಥೋಲಿನ್ ಗೌವ್‌ರವರ ಪ್ರಕಾರ ರೈತ ಚಳುವಳಿಗೆ ಕಾರಣವಾದ ಅಂಶಗಳು
1) ಅಧಿಕ ಕಂದಾಯ ಸಂಗ್ರಹಣೆ. 2) ವಿಭಿನ್ನ ಪ್ರಕಾರದ ಮಧ್ಯವರ್ತಿಗಳು ರೈತರಿಂದ ಕೃಷಿಯಲ್ಲಿ ಹೊದಿದ್ದ ಅಧಿಕ ಉತ್ಪಾದನೆಯನ್ನು ಕಸಿದು ಕೊಂಡಿದ್ದು. 3) ಭೂಮಿಯನ್ನು ಬಂಡವಾಳ ಸ್ವರೂಪದ ಖಾಸಗಿ ಆಸ್ತಿಯನ್ನಾಗಿ ಪರಿಗಣನೆ. 4) ಬ್ರಿಟೀಷರ ಕಾಲದಿಂದ ಬುಡಕಟ್ಟು ಜನರ ಜಮೀನಿನ ಅತಿಕ್ರಮಣ 5) ಕೆಲವೊಂದು ಕೈಗಾರಿಕೆಗಳಿಗೆ ನೀಡಿದ ಬ್ರಿಟೀಷರ ಬೆಂಬಲ ಹಾಗೂ ಇವರ ಆಮದು ರಪ್ತು ನೀತಿಯಿಂದಾಗಿ ಅನೇಕ ಕುಶಲಕರ್ಮಿಗಳು ಜೀವನಾಧಾರವಾಗಿದ್ದ ಉದ್ಯೋಗವನ್ನು ಕಳೆದುಕೊಳ್ಳುವಂತಾಯಿತು. 6) 1921ರ ನಂತರ ಜನಸಂಖ್ಯೆ ತ್ವರಿತ ಗತಿಯಿಂದ ಬೆಳೆಯಿತು. ಇದರಿಂದಾಗಿ ಗ್ರಾಮದ ಮೇಲಿನ ಹೊರೆ ಅಧಿಕವಾಯಿತು. 7) ಕೃಷಿ ಕ್ರಾಂತಿ ಕೂಡಾ ಕೃಷಿ ಆದಾಯದ ಅಸಮತೋಲನ ಹಂಚಿಕೆಗೆ ಕಾರಣವಾಗಿದೆ. ಆಧುನಿಕ ಕೃಷಿ ತಂತ್ರಜ್ಞಾನ, ಉತ್ತಮ ತಳಿಯ ಬೀಜಗಳು, ಗೊಬ್ಬರ ಇತ್ಯಾದಿಗಳ ಪ್ರಯೋಜನ ಕೇವಲ ಶ್ರೀಮಂತ ರೈತರಿಗಷ್ಟೇ ದೊರೆತರೆ ಬಡ ರೈತರ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯು ಆಗಲಿಲ್ಲ.

2. ಮಲಪ್ರಭಾ ಹೋರಾಟಕ್ಕೆ ಸಹಾಯಕವಾದ ಅಂಶಗಳನ್ನು ವಿವರಿಸಿ.
1960ರಲ್ಲಿ 30 ಕೋಟಿ ರೂಪಾಯಿ ವೆಚ್ಚದಲ್ಲಿ ಮಲಪ್ರಭಾ ನದಿಗೆ ಆಣೆಕಟ್ಟನ್ನು ಕಟ್ಟಲು ಉದ್ದೇಶಿಸಲಾಯಿತು. 1980ರಲ್ಲಿ 162 ರೂಪಾಯಿ ವೆಚ್ಚದಲ್ಲೂ ಆಣೆಕಟ್ಟು ಪೂರ್ಣಗೊಳ್ಳಲಿಲ್ಲ. ಬಯಲು ಸೀಮೆಗೆ ವರದಾನವೆಂದು ತಿಳಿದ ಯೋಜನೆ ಶಾಪವಾಗಿ ಪರಿಣಮಿಸಿತು. ಸಾಂಪ್ರದಾಯಿಕ ಬೇಸಾಯದಲ್ಲಿ ಜೋಳ ಮತ್ತು ಹತ್ತಿ ಬೆಳೆ ಬೆಳೆಯುವ ಕರಿಮಣ್ಣು ಭೂಮಿಯಲ್ಲಿ ಮಲಪ್ರಭಾ ಯೋಜನೆಯಡಿ ನೀರಾವರಿ ಸೌಕರ್ಯ ಒದಗಿಸಲಾಯಿತು. ಒಣ ಬೇಸಾಯಕ್ಕೆ ಯೋಗ್ಯವಾದ ಭೂಮಿ ನೀರಾವರಿಯಿಂದ ಕ್ಷಾರ ಹೆಚ್ಚಾಗಿ ಬೇಸಾಯಕ್ಕೆ ಅನುಕೂಲವಾಗುವುದಿಲ್ಲ. ಮಲಪ್ರಭ ರೈತರ ಹೋರಾಟ ಕೇವಲ ಒಂದು ಘಟನೆಗೆ ಸೀಮಿತವಾಗಿರದೆ ಪ್ರತಿಭಟನೆಗೆ ಇನ್ನೂ ಅನೇಕ ಕಾರಣಗಳಿದ್ದವು.
1) ಸ್ಥಿರ ಬೆಲೆಯ ಪ್ರಶ್ನೆ. ಲೆವಿಯ ಪ್ರಶ್ನೆ. 3) ಸ್ಥಳೀಯ ನೌಕರಶಾಹಿಯ ಪಾತ್ರ

3. ಭಾರತದಲ್ಲಿ ಮಹಿಳಾ ಚಳುವಳಿಯನ್ನು ವಿವರಿಸಿ.
ಭಾರತದಲ್ಲಿ ಮಹಿಳಾ ಚಳುವಳಿಯನ್ನು ಎರಡು ಹಂತಗಳಲ್ಲಿ ಅಧ್ಯಯನ ಮಾಡಬಹುದು.
1) ಸ್ವಾತಂತ್ರ್ಯಪೂರ್ವದ ಮಹಿಳಾ ಚಳುವಳಿ. 2) ಸ್ವಾತಂತ್ರ್ಯಾನಂತರದ ಮಹಿಳಾ ಚಳುವಳಿ.
1) ಸ್ವಾತಂತ್ರ್ಯಪೂರ್ವದ ಮಹಿಳಾ ಚಳುವಳಿ:- ಸ್ವಾತಂತ್ರ್ಯಪೂರ್ವದ ಮಹಿಳಾ ಚಳುವಳಿಯು ಸಮಾಜ ಸುಧಾರಣಾ ಚಳುವಳಿಯ ಜೊತೆಗೆ ಸೇರಿ ಹೋಗಿತ್ತು. ವಿಧವೆಯರು, ಸತಿಪದ್ಧತಿ, ವೇಶ್ಯಾವಾಟಿಕೆ, ಪರದಾ ಪದ್ಧತಿ, ಬಾಲ್ಯ ವಿವಾಹ ಮುಂತಾದ ಅನಿಷ್ಟ ಪದ್ಧತಿಗಳ ವಿರುದ್ಧ ಸಮಾಜ ಸುಧಾರಣಾ ಸಂಘಟನೆಗಳು ಹೋರಾಟ ನಡೆಸಿದವು. 1900ರ ಅವಧಿಯಲ್ಲಿ ಸ್ತ್ರೀಯರ ಸಂಘಟನೆಗಳು ಭಾರತದ ನಗರ ಕೇಂದ್ರಗಳಲ್ಲಿ ಪ್ರಾರಂಭಗೊಂಡವು. ಮೈಸೂರಿನಲ್ಲಿ ಮಹಿಳಾ ಸೇವಾ ಸಮಾಜ, ಪೂನಾದಲ್ಲಿ ಭಗಿನಿ ಸಮಾಜ, ಬರೋಡಾದಲ್ಲಿ ಚಾಮನಭಾಯಿ ಪ್ರಸೂತಿ ಮತ್ತು ಶಿಶು ಅಭಿವೃದ್ಧಿ ಕೇಂದ್ರ ಸ್ಥಾಪನೆಯಾಯಿತು. 1905ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ತ್ರೀಯರು ಕಾಣಿಸಿಕೊಂಡರು. 1930ರಲ್ಲಿ ಗಾಂಧೀಜಿಯವರು ಚಾಲನೆ ನೀಡಿದ 'ಅಸಹಕಾರ ಚಳುವಳಿ' ಮತ್ತು 'ಕಾನೂನು ಭಂಗ' ಚಳುವಳಿಯಲ್ಲಿ ಅಪ್ಪ ಪ್ರಮಾಣದಲ್ಲಿ ಸ್ತ್ರೀಯರು ಭಾಗವಹಿಸಿದರು. ಸಮಾನತೆ ಮತ್ತು ಸಮಾನ ಅವಕಾಶಗಳಿಗೆ ಅಡ್ಡಿಯಾಗುವ ಸಾಮಾಜಿಕ, ಶಾಸನಾತ್ಮಕ ಅಂಶಗಳು ನಿವಾರಣೆಯಾಗಬೇಕೆಂದು ಮಹಿಳಾ ಸಂಘಗಳು ಆಗ್ರಹಿಸಿದವು. ಅಖಿಲ ಭಾರತ ಸ್ತ್ರೀಯರ ಸಮ್ಮೇಳನ 1924ರಲ್ಲಿ ಪ್ರಾರಂಭವಾಗಿ ಕಾಲಕ್ರಮೇಣ ಬ್ರಹತ್ ಸಂಘಟನೆಯಾಗಿ ಬೆಳೆಯಿತು. ಸಮಾನ ಹಕ್ಕುಗಳು, ಸಹಶಿಕ್ಷಣ, ವಿವಾಹ, ವಿಚ್ಛೇದನೆ, ಆಸ್ತಿಯ ಉತ್ತರಾಧಿಕಾರ ಹಕ್ಕುಗಳು,ಆರ್ಥಿಕ ಸಮಾನತೆ, ಗಂಡನ ಆದಾಯದಲ್ಲಿ ಸಮಪಾಲು,ವಿಧವೆಯರಿಗೆ ವೃದ್ಯಾಪವೇತನ ಮತ್ತು ಗರ್ಭಪಾತತಡೆ ಕಾನೂನು ಮುಂತಾದ ವೈವಿಧ್ಯ ವಿಷಯಗಳ ಬೇಡಿಕೆ ಅದರದಾಗಿತ್ತು.

2) ಸ್ವಾತಂತ್ರ್ಯಾನಂತರದ ಮಹಿಳಾ ಚಳುವಳಿ:- ಲಿಂಗಬೇದ ರಹಿತ ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾಪ್ರಭುತ್ವ ಸಮಾಜದ ನಿರ್ಮಾಣ ಸ್ತ್ರೀಯರಿಗೆ ಹೊಸ ಬರವಸೆಯನ್ನು ನೀಡಿತು. ಸ್ತ್ರೀಯರ ಬೇಡಿಕೆಗಳಿಗಾಗಿ ವಿವಿಧ ಸಂಘ ಮತ್ತು ಸಂಘಟನೆಗಳು ಹುಟ್ಟಿಕೊಂಡವು. 1960ರ ಹೊತ್ತಿಗೆ ಭರವಸೆಗಳು ಭರವಸೆಗಳಾಗಿಯೇ ಉಳಿದಿವೆ ಎಂದು ಮನವರಿಕೆಯಾಗಿ ಹಲವಾರು ಮಹಿಳಾ ಹೋರಾಟಗಳು ನಡೆದವು. ಸ್ತ್ರೀಯರು ಜಾಜಕಿಯ ಪಕ್ಷದೊಳಗೂ ಕ್ರೀಯಾಶೀಲರಾದರು.

1975ರಲ್ಲಿ ಕಮ್ಯುನಿಷ್ಟ ಪಕ್ಷವು ಸ್ತ್ರೀ ಸಬಲೀಕರಣಕ್ಕೆ ಬೆಂಬಲ ನೀಡಿದವು. ಮಧ್ಯಪಾನ ಚಟ ಮತ್ತು ಹೆಂಡತಿಯರ ಮೇಲಿನ ದೈಹಿಕ ದೌರ್ಜನ್ಯ ಕುರಿತು ಮಹಾರಾಷ್ಟ್ರದ ಶಾಹದ್ ಶಿಬಿರದಲ್ಲಿ ಚರ್ಚಿಸಲಾಯಿತು. ಹೈದರಾಬಾದಿನ ಪ್ರಗತಿಪರ ಮಹಿಳಾ ಸಂಘಟನೆಗಳು ಲೈಂಗಿಕ ಕಿರುಕುಳ ಮತ್ತು ವರದಕ್ಷಿಣೆ ವಿರುದ್ಧ ಹೋರಾಟ ಆರಂಭಿಸಿದರು.

1980ರಲ್ಲಿ ಮಹಿಳಾ ಸಂಘಟನೆಗಳಾದ 'ಸ್ತ್ರೀ ಮುಕ್ತಿ ಸಂಘಟನೆ' ಮುಂಬಯಿ, 'ಸ್ತ್ರೀ ಶಕ್ತಿ ಸಂಘಟನಾ' ಹೈದರಾಬಾದ್ ಮತ್ತು 'ಪುರೋಗಾಮಿ ಸಂಘಟನಾ' ಪೂನಾ ರಚನೆಯಾಯಿತು. ದೆಹಲಿಯಲ್ಲಿ ಸ್ತ್ರೀ ದಕ್ಷತಾ, ಚೆನ್ನೈನಲ್ಲಿ 'ಪೆಣ್‌ಉರಿಮೈ' ಹಾಗೂ ಬೆಂಗಳೂರಿನಲ್ಲಿ 'ವಿಮೋಚನಾ' ಸಂಘಟನೆ ಸ್ಥಾಪನೆಯಾಯಿತು.

ಸ್ವಾತಂತ್ರ್ಯಾನಂತರದ ಮಹಿಳಾ ಸಂಘಟನೆಗಳು ಸ್ತ್ರೀ ವಿರೋಧಿ ಮತ್ತು ಪಕ್ಷಪಾತವನ್ನು ನಿರಂತರವಾಗಿ ಪ್ರತಿಭಟಿಸಿದ್ದಾರೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಹಾಯಹಸ್ತ ನೀಡಿದ್ದಾರೆ. ಲಿಂಗತ್ವ ಸಂವೇದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಕುಟುಂಬ ಯೋಜನೆ, ತಂತ್ರಜ್ಞಾನ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ತಾರತಮ್ಯಗಳ ವಿರುದ್ಧ ಪ್ರತಿಭಟಿಸಿದ್ದಾರೆ.

ಹಿಮಾಲಯದಲ್ಲಿ ನಡೆಯುವ ಅರಣ್ಯ ನಾಶವನ್ನು ತಡೆಗಟ್ಟಲು ಹಮ್ಮಿಕೊಂಡಿರುವ ಅಹಿಂಸಾತ್ಮಕ ಚಳುವಳಿಯೇ ಚಿಪ್ಕೋ ಚಳುವಳಿಯಲ್ಲಿ ಸ್ತ್ರೀಯರ ಪಾತ್ರ ಮಹತ್ತರದ್ದು.

1988-89ರಲ್ಲಿ ಜಾರಿಗೊಳಿಸಿದ 'ಸಮಗ್ರ ಸಾಕ್ಷರ ಕಾರ್ಯಕ್ರಮ'ದ ಪಾಠದಿಂದ ಜಾಗೃತಗೊಂಡು ಮದ್ಯಪಾನ ವಿರೋಧಿ ಪಾಠವನ್ನು ಮಹಿಳೆಯರು ಆಂಧ್ರ ಪ್ರದೇಶದ 'ದೀಬುಗುಂಟ' ಎಂಬ ಗ್ರಾಮದಿಂದ ಆರಂಬಿಸಿ ಇಡಿ ಆಂಧ್ರಪ್ರದೇಶ ರಾಜ್ಯವನ್ನು ಪಾನ ನಿಷೇದ ರಾಜ್ಯವನ್ನಾಗಿಸಲು ಸಹಕಾರಿಯಾದರು.



Sreenivasa U K

4. ದಲಿತ ಚಳುವಳಿಯ ಕುರಿತು ಟಿಪ್ಪಣಿ ಬರೆಯಿರಿ.

ದಲಿತ ಚಳುವಳಿಯು ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆ ಹಾಗೂ ವ್ಯವಸ್ಥೆಗಳ ವಿರುದ್ಧ ಪ್ರಜ್ಞಾಪೂರ್ವಕವಾಗಿ ದಲಿತರನ್ನು ಸಂಘಟಿಸಿ ಹೂಡುವ ಚಳುವಳಿ. ಶತಮಾನಗಳ ದಾರಿದ್ರ್ಯ, ದಬ್ಬಾಳಿಕೆ, ಶೋಷಣೆ ಮತ್ತು ಮೂಲಭೂತ ಸಮಸ್ಯೆಗಳಿಂದ ದಲಿತರನ್ನು ಮುಕ್ತಗೊಳಿಸಿ, ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬದುಕಿನ ಅನ್ವೇಷಣೆಯೇ ದಲಿತ ಚಳುವಳಿಯ ಮೂಲ ಆಶಯ.

ಈ ಚಳುವಳಿಯನ್ನು ಎರಡು ಘಟ್ಟಗಳಲ್ಲಿ ಚರ್ಚಿಸಬಹುದು. ಅವುಗಳೆಂದರೆ

ಸ್ವಾತಂತ್ರ್ಯಪೂರ್ವ ದಲಿತ ಚಳುವಳಿ ಮತ್ತು ಸ್ವಾತಂತ್ರ್ಯಾನಂತರದ ದಲಿತ ಚಳುವಳಿ.

ಸ್ವಾತಂತ್ರ್ಯಪೂರ್ವ ದಲಿತ ಚಳುವಳಿಯೆದರೆ:–

1) ಬಸವೇಶ್ವರ ಮತ್ತು ದಲಿತ ಚಳುವಳಿ. 2 )ಹಳೇ ಮೈಸೂರು ಪ್ರಾಂತ್ಯದ ದಲಿತ ಚಳುವಳಿ. 3) ಮುಂಬಯಿ ಕರ್ನಾಟಕದ ದಲಿತ ಚಳುವಳಿ

ಸ್ವಾತಂತ್ರ್ಯಾನಂತರದ ದಲಿತ ಚಳುವಳಿಃ 1) ಭೀಮಸೇನಾ. 2)ದಲಿತ ಸಂಘರ್ಷ ಸಮಿತಿ.

5. ಕರ್ನಾಟಕ ರೈತ ಸಂಘದ ಹೋರಾಟದ ಪ್ರಮುಖ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

ಕರ್ನಾಟಕ ರೈತ ಸಂಘದ ಹೋರಾಟದ ಪ್ರಮುಖ ವಿಷಯಗಳುಃ 1) ಸಾಲ ವಸೂಲಿ ವಿಷಯ ಮತ್ತು ಭ್ರಷ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳು ಗ್ರಾಮ ಪ್ರವೇಶ ನಿಷೇದ. 2) ಪರಿಸರದ ವಿಷಯ. 3) ಗಣಿಗಾರಿಕೆ. ಬಹುರಾಷ್ಟ್ರೀಯ ಕಂಪನಿಗಳ ವಿರೋಧ. 4) ನೀರಾ ಚಳುವಳಿ.

6. ಕರ್ನಾಟಕ ರಾಜ್ಯ ರೈತ ಸಂಘವು ಸರ್ಕಾರದ ಮುಂದಿಟ್ಟ ಬೇಡಿಕೆಗಳನ್ನು ಪಟ್ಟಿ ಮಾಡಿ.

1980ರಲ್ಲಿ ಮಲಪ್ರಭಾ ರೈತರ ಸಮನ್ವಯ ಸಮಿತಿ 19 ಬೇಡಿಕೆಯನ್ನು ಗುರುತಿಸಿ ಈಡೇರಿಕೆಗಾಗಿ ತೀವ್ರ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

ರೈತರ ಬೇಡಿಕೆಗಳ ಪಟ್ಟಿ:–

1) ವಿಭಿನ್ನ ಚಳುವಳಿಗಳಲ್ಲಿ ಭಾಗವಹಿಸಿ ಬಂದನಕ್ಕೊಳಗಾಗಿರುವ ರೈತರ ಮೇಲಿರುವ ಮೊಕದ್ದಮೆಯನ್ನು ಹಿಂತೆಗೆದುಕೊಂಡು ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು. 2) ರೈತರ ಸಾಲ ಮನ್ನಾ ಮಾಡಿ ಬ್ಯಾಂಕ್ ಮತ್ತು ಸಹಕಾರಿ ಸೊಸೈಟಿಗಳ ಮಧ್ಯಸ್ಥಿಕೆಯಿಲ್ಲದೆ ಸರಕಾರವು ನೇರವಾಗಿ ಸಾಲ ನೀಡಬೇಕು. 3) ಹೆಚ್ಚುತ್ತಿರು ಕೇಷಿ ವೆಚ್ಚಕ್ಕೆ ಅನುಗುಣವಾಗಿ ಸಾಲ ನೀಡಬೇಕು. 4) ಹರಾಜು ಹಾಕಿದ್ದ ಮತ್ತು ಮುಟ್ಟುಗೋಲು ಹಾಕಿದ್ದ ರೈತರ ಆಸ್ತಿಯನ್ನು ಹಿಂತಿರುಗಿಸಬೇಕು. 5) ಬೆಟರಮೆಂಟ್ ಲೆವಿ, ಕೆರೆ ನೀರಿನ ಮೇಲಿನ ಕರ, ಕೃಷಿ ತೆರಿಗೆಯನ್ನು ತೆಗೆದುಹಾಕಿ ಉತ್ಪಾದನೆ ಆಧಾರಿತ ತೆರಿಗೆಯನ್ನಷ್ಟೆ ವಿಧಿಸಬೇಕು. 6) ಟ್ರಾಕ್ಟರ್ ಟ್ರೇಲರ್ ಮೇಲಿನ ಎಲ್ಲ ತೆರಿಗೆಗಳನ್ನು ನಿರ್ಬಂಧಗಳನ್ನು ತೆಗೆದುಹಾಕಬೇಕು. 7) ಕಬ್ಬಿನ ಮೇಲಿನ ಕೊಳ್ಳುವ ತೆರಿಗೆಯನ್ನು ತೆಗೆಯಬೇಕು. ವಿದ್ಯುತ್ ದರ ಪ್ರತಿ ಯುನಿಟ್‌ಗೆ 6.5ಪೈಸೆಯಂತೆ ನಿಗದಿಪಡಿಸಬೇಕು. 8) ಸರಕಾರವೇ ಕೃಷಿ ಉತ್ಪನ್ನವನ್ನು ಕೊಂಡು ವೈಜ್ಞಾನಿಕವಾಗಿ ಲೆಖ್ಖ ಹಾಕಿ ದರವನ್ನು ನಿಗದಿಗೊಳಿಸಬೇಕು. 9) ಬೆಲೆ ನಿಗದಿಗೊಳಿಸುವ ತತ್ವ ವಾಸ್ತವವಾಗಿರಬೇಕು. 10) ಕೃಷಿಯನ್ನು ಉದ್ಯಮವೆಂದು ಘೋಷಿಸಿ ಕೈಗಾರಿಕಾ ಕಾರ್ಮಿಕರಿಗೆ ಸಿಗುವ ಎಲ್ಲ ಸೌಲಭ್ಯವನ್ನು ಕೃಷಿ ಕಾರ್ಮಿಕರಿಗೂ ವಿಸ್ತರಿಸಬೇಕು. 11) ಪ್ರಿಮಿಯಂ ಕಟ್ಟದೇ ಬೆಳೆ ವಿಮೆಯನ್ನು ರಾಜ್ಯಾದಂತ ಒದಗಿಸಬೇಕು. 12) ಪ್ರತಿಯೊಬ್ಬ ರೈತ ಮತ್ತು ರೈತ ಕಾರ್ಮಿಕನಿಗೆ ನಿವೃತ್ತಿ ವೇತನ ದೊರಕಬೇಕು. 13) ಕಾಲದಿಂದ ಕಾಲಕ್ಕೆ ಕೃಷಿ ಕಾರ್ಮಿಕರ ಕೂಲಿಯನ್ನು ಹೆಚ್ಚಿಸಬೇಕು. 14) ಕೃಷಿಯೋಗ್ಯ ಸರಕಾರಿ ಜಮೀನನ್ನು ಭೂಹೀನ ಕೃಷಿ ಕಾರ್ಮಿಕರಿಗೆ ನೀಡಿ ಸರಕಾರದ ಉಸ್ತುವಾರಿಯಲ್ಲಿ ಸಾಗುವಳಿ ಮಾಡಬೇಕು. 15) ಭೂಸುಧಾರಣೆಯಿಂದ ಜಮೀನು ಕಳೆದುಕೊಂಡ ಭೂಮಾಲಿಕರಿಗೆ ಒಂದೇ ಕಂತಿನಲ್ಲಿ ಪರಿಹಾರ ಧನ ನೀಡಿ ಭೂಮಿ ಪಡೆದುಕೊಂಡ ಗೇಣಿದಾರರಿಗೆ ಹಕ್ಕುಪತ್ರ ನೀಡಬೇಕು. 16) ಯೋಜನಾ ವೆಚ್ಚದಲ್ಲಿ 80%ನಷ್ಟು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಮೀಸಲಿಡಬೇಕು. 17) ಗ್ರಾಮೀಣಭಾಗಕ್ಕೆ ಸಂಚಾರಯೋಗ್ಯ ರಸ್ತೆಗಳನ್ನು ಒದಗಿಸಬೇಕು. 18) ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಹುದ್ದೆಗಳಲ್ಲಿ ರೈತಮಕ್ಕಳಿಗೆ 50% ಮೀಸಲಾತಿ ನೀಡಬೇಕು.

## ಅಧ್ಯಾಯ ೩ 8 ಭಾರತದಲ್ಲಿ ಸಾಮಾಜಿಕ ಪರಿವರ್ತನೆ.

### ಒಂದು ಅಂಕದ ಪ್ರಶ್ನೆಗಳು

1. ಅಧುನೀಕರಣ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದವರು ಯಾರು?
   **ಡೇನಿಯಲ್ ಲರ್ನರ್.**
2. ಪಾಶ್ಚಿಮಾತ್ಯೀಕರಣ ಪರಿಕಲ್ಪನೆ ಪರಿಚಯಿಸಿದವರು ಯಾರು?
   **ಎಂ.ಎನ್.ಶ್ರೀನಿವಾಸ.**
3. ಪಾಶ್ಚಿಮಾತ್ಯೀಕರಣ ಎಂದರೇನು?
   **ಪಾಶ್ಚಾತ್ಯೀಕರಣವು ಸುಮಾರು 150 ವರ್ಷಗಳ ಬ್ರಿಟೀಷ್ ಆಳ್ವಿಕೆಯ ಪ್ರಭಾವದಿಂದ ಭಾರತದ ಸಾಮಾಜಿಕ ಸಂರಚನೆಯಲ್ಲಿ ಸಂಭವಿಸಿರುವ ಪರಿವರ್ತನೆಯನ್ನು ಸೂಚಿಸುತ್ತದೆ.**
4. ಅಧುನೀಕರಣದ ಒಂದು ಲಕ್ಷಣವನ್ನು ಬರೆಯಿರಿ.
   **ಎ)ಶಿಕ್ಷಣ. ಬಿ)ಸಂವಹನ. ಸಿ)ರಾಷ್ಟ್ರೀಯತೆಯ ಆದರ್ಶಗಳು. ಡಿ)ಜನಾಕರ್ಷಕ ನಾಯಕತ್ವ.**
5. ಜಾಗತಿಕ ಪ್ರಜೆಯ ಒಂದು ಲಾಂಛನ ಯಾವುದು?
   **ಬಾರ್ಬಿ ಬೋಂಬೆಯು ಜಾಗತಿಕ ಪ್ರಜೆಯ ಒಂದು ಲಾಂಛನವಾಗಿದೆ.**
6. ಬಹುರಾಷ್ಟ್ರೀಯ ಕಂಪನಿ ಒಂದನ್ನು ಹೆಸರಿಸಿ.
   **ಪೆಪ್ಸಿ, ಕೋಕ ಕೋಲಾ.**
7. ಸಂಸ್ಕೃತಾನುಕರಣ ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು?
   **ಎಂಎನ್.ಶ್ರೀನಿವಾಸರವರು.**
8. "ಜಾಗತೀಕರಣ" ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು?
   **ತಿಯೋಡರ್ ಲೆವಿಟ್.**
9. 'ರಿಲಿಜನ್ ಆಂಡ್ ಸೊಸೈಟಿ ಆಮೊಂಗ್ ದ ಕೂರ್ಗ್ಸ್ ಆಫ್ ಸೌತ್ ಇಂಡಿಯಾ' ಗಂಥದ ಕರ್ತೃ ಯಾರು?
   **ಎಂ.ಎನ್.ಶ್ರೀನಿವಾಸ.**
10. 'ಸೋಸಿಯಲ್ ಚೇಂಜ್ ಇನ್ ಮೊಡರ್ನ ಇಂಡಿಯಾ' ಗಂಥದ ಕರ್ತೃ ಯಾರು?
    **'ಸೋಸಿಯಲ್ ಚೇಂಜ್ ಇನ್ ಮೊಡರ್ನ ಇಂಡಿಯಾ' ಗಂಥದ ಕರ್ತೃ ಎಂ.ಎನ್.ಶ್ರೀನಿವಾಸ.**
11. ದ್ವಿಜರು ಎಂದರೆ ಯಾರು?
    **ಉಪನಯನ ಸಂಸ್ಕಾರದ ಅರ್ಹತೆ ಹೊಂದಿರುವ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯತನ್ನು ದ್ವಿಜರೆನ್ನುವರು.**



Sreenivasa U K

## ಎರಡು ಅಂಕದ ಪ್ರಶ್ನೆಗಳು

1. "ಸಂಸ್ಕೃತಾನುಕರಣ" ಎಂದರೇನು?
**ಕೆಳ ಹಿಂದೂ ಜಾತಿ ತನ್ನ ಪದ್ಧತಿ, ಸಂಸ್ಕಾರ, ಭಾವನೆ ಮತ್ತು ಜೀವನ ವಿಧಾನವನ್ನು ದ್ವಿಜರ ರೀತಿ ನೀತಿಗಳಿಗೆ ಅನುಸಾರವಾಗಿ ಮಾರ್ಪಡಿಸಿಕೊಳ್ಳುವ ಪ್ರಕ್ರಿಯೆಗೆ ಸಂಸ್ಕೃತಾನುಕರಣ ಎನ್ನುವರು.**
2. ಪಾಶ್ಚಾತ್ಯೀಕರಣದ ಯಾವುದಾದರೂ ಎರಡು ಕ್ಷೇತ್ರಗಳನ್ನು ತಿಳಿಸಿ.
**1) ತಂತ್ರಜ್ಞಾನ. 2) ಸಾಮಾಜಿಕ ಸಂಸ್ಥೆಗಳು. 3) ತತ್ವಾದರ್ಶಗಳು ಮತ್ತು ಮೌಲ್ಯಗಳು.**
3. ಜಾಗತೀಕರಣಕ್ಕೆ ಸಹಾಯಕವಾದ ಯಾವುದಾದರು ಎರಡು ಅಂಶಗಳನ್ನು ತಿಳಿಸಿ.
**1) ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪ್ರಗತಿ ಹಾಗೂ ಮಾಹಿತಿಗಳ ನಿರಂತರ ಹರಿವು.**
4. ಅಧುನೀಕರಣದ ಯಾವುದಾದರೂ ಎರಡು ಗುಣಲಕ್ಷಣಗಳನ್ನು ತಿಳಿಸಿರಿ.
**1) ಶಿಕ್ಷಣ. 2) ಸಂವಹನ. 3) ರಾಷ್ಟ್ರೀಯತೆ ಆಧಾರವಾದ ಆದರ್ಶಗಳು.**
5. ಪಾಶ್ಚಾತ್ಯೀಕರಣವನ್ನು ವ್ಯಾಖ್ಯಾನಿಸಿ.
**ಪಾಶ್ಚಾತ್ಯೀಕರಣವು ಸುಮಾರು 150 ವರ್ಷಗಳ ಬ್ರಿಟೀಷ್ ಆಳ್ವಿಕೆಯ ಪ್ರಭಾವದಿಂದ ಭಾರತದ ಸಾಮಾಜಿಕ ಸಂರಚನೆಯಲ್ಲಿ ಸಂಭವಿಸಿರುವ ಪರಿವರ್ತನೆಯನ್ನು ಸೂಚಿಸುತ್ತದೆ.**
6. ಯಾವುದಾದರೂ ಎರಡು ಬಹುರಾಷ್ಟ್ರೀಯ ಕಂಪನಿಗಳನ್ನು ಹೆಸರಿಸಿ.
**ಪೆಪ್ಸಿ, ಕೊಕಕೋಲಾ, ಜಾನ್ಸನ್ ಅಂಡ್ ಜಾನ್ಸನ್. ಕೋಲ್ಗೇಟ್ ಇತ್ಯಾದಿ.**
7. ಅಧುನೀಕರಣ ಎಂದರೇನು?
**ಡೇನಿಯಲ್ ಲರ್ನರ್ ಅವರ ಪ್ರಕಾರ ಆಧುನೀಕರಣವು ಸಾಮಾಜಿಕ ಪರಿವರ್ತನೆಯ ಕಡಿಮೆ ಅಭಿವೃದ್ಧಿ ಹೊಂದಿರುವ ದೇಶಗಳು ಹೆಚ್ಚು ಅಭಿವೃದ್ಧಿ ಹೊಂದಿದ ದೇಶಗಳ ಸಾಮಾನ್ಯ ಗುಣಲಕ್ಷಣಗಳನ್ನು ಸ್ವೀಕರಿಸಿಕೊಳ್ಳುವ ಪ್ರವೃತ್ತಿಯಾಗಿದೆ.**
8. 'ಜಾಗತೀಕರಣ' ಎಂದರೇನು?
**'ಜಾಗತೀಕರಣ'ವು ಜಗತ್ತಿನಾದ್ಯಂತ ಏಕರೀತಿಯ ಸಂಸ್ಕೃತಿ ಮತ್ತು ಆರ್ಥಿಕ ಹಿತಾಸಕ್ತಿ ಹರಡುವಿಕೆಯ ಸಂಕೇತವಾಗಿದೆ.**
9. ಜಾಗತಿಕ ಅನನ್ಯತೆ ಎಂದರೇನು?
**ಜನರು ತಮ್ಮ ವ್ಯಕ್ತಿತ್ವದ ಪ್ರತಿರೂಪವನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಸಂವಹನ ಅಂತರ್ಜಾಲದಿಂದ ರೂಪಿಸಿಕೊಳ್ಳುತ್ತಿದ್ದಾರೆ. ಹೀಗೆ ಸ್ಥಳೀಯ ಅಥವಾ ಪ್ರಾದೇಶಿಕ ಸಂಬಂಧಗಳನ್ನು ಮೀರಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಬಂಧಗಳು ಸೃಷ್ಠಿಯಾಗುತ್ತಿರುವ ಪ್ರವೃತ್ತಿಯನ್ನು ಜಾಗತಿಕ ಅನನ್ಯತೆ ಎನ್ನುವರು.**
10. ಬ್ರಾಹ್ಮಣೀಕರಣ ಮತ್ತು ಸಂಸ್ಕೃತಾನುಕರಣಗಳ ನಡುವಿನ ಎರಡು ವ್ಯತ್ಯಾಸಗಳನ್ನು ತಿಳಿಸಿ.
**1) ಸಂಸ್ಕೃತಾನುಕರಣವು ಬ್ರಾಹ್ಮಣೀಕರಣಕ್ಕಿಂತ ಹೆಚ್ಚು ವ್ಯಾಪಕ ಅರ್ಥವಿರುವ ಪರಿಕಲ್ಪನೆ. 2) ಬ್ರಾಹ್ಮಣೀಕರಣವು ಹಿಂದು ಸಮುದಾಯದ ಕೆಲವು ಕೆಳಜಾತಿಗಳಲ್ಲಿ ಮಾತ್ರ ಕಂಡುಬಂದರೆ ಸಂಸ್ಕೃತಾನುಕರಣವು ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುತ್ತದೆ.**

## ಐದು ಹಾಗೂ ಹತ್ತು ಅಂಕದ ಪ್ರಶ್ನೆಗಳು:

1. ಭಾರತದಲ್ಲಿ ಅಧುನಿಕರಣ ಪ್ರಕ್ರಿಯೆಯನ್ನು ವಿಶ್ಲೇಷಿಸಿರಿ.
1. ಶಿಕ್ಷಣ:- ಶಿಕ್ಷಣವು ಆಧುನಿಕರಣದ ಅತ್ಯಂತ ಪ್ರಭಾವಿ ಸಾಧನವಾಗಿದೆ. ಇದು ರಾಷ್ಟ್ರೀಯ ಪ್ರಜ್ಞೆಯನ್ನು, ಹೊಸ ಹೊಸ ತಾಂತ್ರಿಕ ಶೋಧಗಳಿಗೆ ಅಗತ್ಯವಾದ ಕೌಶಲ್ಯ ಮತ್ತು ಮನೋಭಾವನೆಗಳನ್ನು ಸೃಷ್ಟಿಸುತ್ತದೆ. ಶಿಕ್ಷನ ಬಹುಮುಖವಾಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಹೆಚ್ಚಳವಾಗುವುದು.
2. ಸಂವಹನ:- ಸಂವಹನ ಕ್ಷೇತ್ರದಲ್ಲಿ ಸಾಮೂಹಿಕ ಮಾಧ್ಯಮಗಳಾದ ಪತ್ರಿಕೆಗಳು, ರೇಡಿಯೋ, ದೂರವಾಣಿ, ದೂರದರ್ಶನ, ಚಲನಚಿತ್ರ ಮುಂತಾದವುಗಳು ತೀವ್ರವಾದ ಪ್ರಗತಿಯನ್ನು ಹೊಂದಿದೆ. ಇವುಗಳ ಬೆಳವಣಿಗೆಯಿಂದಾಗಿ ಆಧುನಿಕ ಜ್ಞಾನ, ವಿಚಾರಗಳ ಹಾಗೂ ಮಾಹಿತಿಗಳನ್ನು ಮೂಲೆ ಮೂಲೆಯಲ್ಲಿರುವ ಜನರಿಗೂ ತಲುಪಿಸಲು ಸಹಕಾರಿಯಾಗಿದೆ.
3. ರಾಷ್ಟ್ರೀಯತೆಯ ಆದರ್ಶಗಳು:- ಪಶ್ಚಿಮ ರಾಷ್ಟ್ರಗಳಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಯೊಂದಿಗೆ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಲಗೊಳ್ಳುತ್ತ ಹೋಯಿತು. ವ್ಯಕ್ತಿ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು, ವೈಚಾರಿಕತೆ ಹಾಗೂ ವೈಜ್ಞಾನಿಕತೆಗಳ ಬಗ್ಗೆ ಜನರು ವಿಶೇಷ ಒಲವು ತೋರಿಸತೊಡಗಿದರು. ಇವು ಬಹೂರೂಪ ಸಮಾಜಗಳಲ್ಲಿ ಜನರ ನಡುವಿನ ಭಿನ್ನತೆ, ವಿಷಮತೆ, ತಾರತಮ್ಯಗಳನ್ನು ತಗ್ಗಿಸಿ ಅವರನ್ನು ಒಂದೂಗೂಡಿಸಿ ಏಕತೆಯ ಭಾವನೆಯನ್ನು ಮೂಡಿಸಿದವು.
4 ಜನಾಕರ್ಷಕ ನಾಯಕತ್ವ:- ಕೆಲವು ವ್ಯಕ್ತಿಗಳು ವಿಶಿಷ್ಟವಾದ ಗುಣಗಳಿಂದ ಜನರ ಮನಸ್ಸನ್ನು ಗೆಲ್ಲುತ್ತಾರೆ. ಇಂತಹ ವ್ಯಕ್ತಿಗಳು ಆಧುನಿಕ ನಂಬಿಕೆಗಳು, ಮೌಲ್ಯಗಳು, ಆಚರಣೆಗಳು, ಜೀವನಶೈಲಿ, ವರ್ತನೆಗಳನ್ನು ಜನಸಾಮಾನ್ಯರೂ ಅಳವಡಿಸಿಕೊಳ್ಳುವಂತೆ ಪ್ರಧರಣೆ ನೀಡುತ್ತಾರೆ. ಭಾರತದಲ್ಲಿ ಗಾಂಧೀಜಿ, ರಾಜಾರಾಮ ಮೋಹನರಾಯ, ತಿಲಕ, ನೆಹರು ಮುಂತಾದವರ ಮೂಲಕ ಆಧುನಿಕ ಮೌಲ್ಯಾದರ್ಶಗಳು ಜನರ ಸ್ವೀಕೃತಿ ಗಳಿಸಿದವು.

2. ಜಾಗತೀಕರಣಕ್ಕೆ ಸಹಾಯಕವಾದ ಐದು ಪ್ರಮುಖ ಅಂಶಗಳನ್ನು ವಿವರಿಸಿರಿ.
ಅಂತೋನಿ ಗಿಡ್ಡಿಸ್ ತಮ್ಮ ಸೋಸಿಯಾಲಜಿ ಎಂಬ ಕೃತಿಯಲ್ಲಿ ಜಾಗತೀಕರಣಕ್ಕೆ ಸಹಾಯಕವಾದ ಈ ಕೆಳಗಿನ ಅಂಶಗಳನ್ನು ವಿವರಿಸಿದ್ದಾರೆ. 1) ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪ್ರಗತಿ. 2) ಮಾಹಿತಿಗಳ ನಿರಂತರ ಪ್ರವಾಹ. 3) ಆರ್ಥಿಕ ಅಂಶಗಳು. 4) ಬಹುರಾಷ್ಟ್ರೀಯ ಕಂಪನಿಗಳು. 5) ವಿದ್ಯುನ್ಮಾನ ಆರ್ಥಿಕತೆ. 6) ರಾಜಕೀಯ ಪರಿವರ್ತನೆಗಳು.

3. ಸಂಸ್ಕೃತಾನುಕರಣದ ಐದು ಪ್ರಮುಖ ಅಂಶಗಳನ್ನು ತಿಳಿಸಿ.
ಸಂಸ್ಕೃತಾನುಕರಣವುಉನ್ನತ ಜಾತಿಗಳ ಸಂಪ್ರದಾಯ, ಜೀವನ ವಿಧಾನಗಳನ್ನು ಅನುಕರಣೆ ಮಾಡುವ ಪ್ರಕ್ರಿಯೆಯಾಗಿದ್ದು ಅದು ಈ ಕೆಳಕಂಡ ಅಂಶಗಳಲ್ಲಿ ಕಂಡುಬರುತ್ತದೆ.
1) ಕ್ರಿಯಾವಿಧಿಗಳು:- ನಿರ್ಬಂಧನೆಗಳಿದ್ದರೂ ಕೆಳಜಾತಿಗಳು ದ್ವಿಜ ಜಾತಿ ಸಮೂಹಗಳ ಸಂಪ್ರದಾಯ ಮತ್ತು ಕ್ರಿಯಾವಿಧಿಗಳಾದ ಧಾರ್ಮಿಕ ಪೂಜಾಕ್ರಮ, ಮಂತ್ರಗಳ ಉಚ್ಚಾರಣೆ, ತೀರ್ಥಯಾತ್ರೆ, ವ್ರತಗಳು ಮುಂತಾದವುಗಳನ್ನು ಕೈಗೊಳ್ಳುವುದು.
2) ವಿವಾಹ: 3) ವಿಧವೆಯರನ್ನು ನೋಡಿಕೊಳ್ಳುವ ವಿಧಾನ 4) ಸ್ತ್ರೀಯರನ್ನು ನೋಡಿಕೊಳ್ಳುವ ಕ್ರಮಃ 4) ಆಹಾರ ಪದ್ಧತಿ:- ಭಾರತದಲ್ಲಿ ಬ್ರಾಹ್ಮಣರು ಸಸ್ಯಾಹಾರಿಗಳು. ಕೆಳಜಾತಿಯವರು ಸಾಮಾನ್ಯವಾಗಿ ಮಾಂಸಹಾರಿಗಳಾಗಿದ್ದಾರೆ. ಸಂಸ್ಕೃತಾನುಕರಣ ಪ್ರಕ್ರಿಯೆಯ ಪ್ರಭಾವದಿಂದ ಕೆಲವು ಕೆಳಜಾತಿಗಳು ಸಸ್ಯಾಹಾರಿಗಳಾಗಿದ್ದಾರೆ ಮತ್ತು ಮದ್ಯಪಾನ ಸೇವನೆಯನ್ನು ತ್ಯಜಿಸಿದ್ದಾರೆ.

Sreenivasa U K

Sreenivasa U K Lecturer in Sociology, P.M. Composite Junior College, Ankola-581314